# ಡಿಸಿಇಟಿ – 2026 – ಡಿಪ್ಲೊಮಾ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷ / ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ ಹಾಗೂ ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ ಪ್ರವೇಶಾತಿ

## ಡಿಪ್ಲೊಮಾ ಆನ್‌ಲೈನ್ ಸೀಟು ಹಂಚಿಕೆ ಕುರಿತು ಸಂಕ್ಷಿಪ್ತ ಇ–ಮಾಹಿತಿ ಪುಸ್ತಕ

## 1. ಪೀಠಿಕೆ

1.1 ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ ನಿಯಮಗಳು, 2006 (ಸಂಕ್ಷಿಪ್ತವಾಗಿ ನಿಯಮಗಳು) ಇದನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವುದಕ್ಕೆ ಅನುಸಾರವಾಗಿ ಸೀಟು ಹಂಚಿಕೆ ಮತ್ತು ಪ್ರವೇಶವನ್ನು ನೀಡಬೇಕಿರುತ್ತದೆ. ಆದ್ದರಿಂದ, 2026–27ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ತಂತ್ರಜ್ಞಾನ, ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶಾತಿಗೆ ಈ ಮಾಹಿತಿ ಪುಸ್ತಕವು ಒಳಗೊಂಡಿರುವ ವಿವರಗಳು ಮತ್ತು ಸೂಚನೆಗಳು ಸದರಿ ನಿಯಮಗಳಿಗೆ ಸರ್ಕಾರದ ಆದೇಶಗಳಿಗೆ ಒಳಪಟ್ಟಿರುತ್ತವೆ; ಒಂದು ವೇಳೆ ಯಾವುದೇ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲಿ, ಈ ನಿಯಮಗಳು ಊರ್ಜಿತವಾಗುತ್ತವೆ.

1.2 ಪ್ರತಿಯೊಂದು ಡಿಸಿಪ್ಲಿನಿಗೆ ಸಂಬಂಧಿಸಿದಂತೆ ಸರ್ಕಾರ ನೀಡುವ ಸೀಟ್ ಮ್ಯಾಟ್ರಿಕ್ಸನ್ನು ಸೀಟುಗಳ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಅಳವಡಿಸಿಕೊಳ್ಳಲಾಗುವುದು. ಸರ್ಕಾರ ನೀಡುವ ಕಾಲೇಜುವಾರು, ಕೋರ್ಸ್‌ವಾರು ಮತ್ತು ಪ್ರವರ್ಗವಾರು ಸೀಟ್ ಮ್ಯಾಟ್ರಿಕ್ಸನ್ನು, ವಿದ್ಯಾರ್ಥಿಗಳು ಮತ್ತು ಪೋಷಕರ ಮಾಹಿತಿಗಾಗಿ, ಮೊದಲನೇ ಸುತ್ತನ್ನು ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಮತ್ತು ಕಾಲಕಾಲಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

1.3 ಸರ್ಕಾರದಿಂದ ಸೀಟ್ ಮ್ಯಾಟ್ರಿಕ್ಸ್ ದೊರೆತ ನಂತರ ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು (Option Entry) ನಮೂದಿಸುವುದು ಪ್ರಾರಂಭವಾಗುತ್ತದೆ. ಹಂಚಿಕೆಗೆ ಲಭ್ಯವಿರುವ ಸೀಟುಗಳ ಕಾಲೇಜುವಾರು, ಕೋರ್ಸುವಾರು ಮತ್ತು ಪ್ರವರ್ಗವಾರು ಸೀಟುಗಳ ವಿವರಗಳನ್ನು ಕ.ಪ.ಪ್ರಾ.ದ ವೆಬ್‌ಸೈಟ್ (https://cetonline.karnataka.gov.in/kea/) ನಲ್ಲಿ ಪ್ರಕಟಿಸಲಾಗುವುದು. ಇದನ್ನು ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಂಡು, ಮುದ್ರಿತ ಪ್ರತಿಯನ್ನು ತೆಗೆದುಕೊಳ್ಳಬಹುದು.

1.4 ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಸೀಟುಗಳ ಪರಸ್ಪರ ವರ್ಗಾವಣೆ ಮನವಿಗಳನ್ನು ಯಾವುದೇ ಹಂತದಲ್ಲಿ ಪ್ರಾಧಿಕಾರವು ಪರಿಗಣಿಸುವುದಿಲ್ಲ.

1.5 **ಸೀಟನ್ನು ರದ್ದು ಪಡಿಸಬೇಕಾಗಿದ್ದಲ್ಲಿ, ಅಭ್ಯರ್ಥಿಯು ಖುದ್ದಾಗಿ ಕಡ್ಡಾಯವಾಗಿ ಕೆಇಎ ಕಛೇರಿಯಲ್ಲಿ ಲಿಖಿತ ರೂಪದಲ್ಲಿ ಮಾತ್ರ ರದ್ದುಪಡಿಸಬೇಕು. ಅಭ್ಯರ್ಥಿಯು ಸೀಟನ್ನು ಪಡೆದು ಸಂಬಂಧಿಸಿದ ಕಾಲೇಜಿನಲ್ಲಿ ಪ್ರವೇಶ ಪಡೆಯದೆ ಇದ್ದ ಮಾತ್ರಕ್ಕೆ ಸೀಟನ್ನು ಕೆಇಎ ಕಛೇರಿಯಲ್ಲಿ ರದ್ದು ಪಡಿಸಿಕೊಳ್ಳಲಾಗಿದೆಯೆಂದು ಭಾವಿಸಬಾರದು.**

1.6 **ಶುಲ್ಕದ ಮರುಸಂದಾಯ ಮತ್ತು ಮುಟ್ಟುಗೋಲಿಗೆ ಸಂಬಂಧಿಸಿದಂತೆ ದಯವಿಟ್ಟು, ಈ ಮಾಹಿತಿ ಪುಸ್ತಕದಲ್ಲಿ ವಿವರವಾಗಿ ಹೇಳಿರುವ ಷರತ್ತುಗಳನ್ನು ಓದಿ.**

1.7 **ಪ್ರಾಧಿಕಾರವು ಕಾಲೇಜುಗಳಿಗೆ ಮಾಡುವ ಎಲ್ಲಾ ಹಂಚಿಕೆಗಳು ಮತ್ತು ಕಾಲೇಜುಗಳು ಮಾಡಿಕೊಳ್ಳುವ ಎಲ್ಲಾ ದಾಖಲಾತಿಗಳು,** ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು AICTE, COA, ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾಲಯಗಳು, ಅಪೆಕ್ಸ್ ಸಂಸ್ಥೆಗಳು ಕಾಲಕಾಲಕ್ಕೆ ನಿಗದಿಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ;

1.8 ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣ ಪತ್ರಗಳು / ದಾಖಲೆಗಳ ದೃಢೀಕರಣ ಹಾಗು ನೈಜತೆಯನ್ನು ಪರಿಶೀಲಿಸುವ ಅಥವಾ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು / ನಿಬಂಧನೆಗಳನ್ನು ಪೂರೈಸದ ಅಭ್ಯರ್ಥಿಯ ಅರ್ಹತೆಯನ್ನು ಮತ್ತು ಅಂತಹ ಅರ್ಹತೆಯಿಂದ ನೀಡಿದ ಪ್ರವೇಶವನ್ನು, ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳುವ ಹಕ್ಕನ್ನು ಕೆಇಎ ಕಾಯ್ದಿರಿಸುತ್ತದೆ.

## 1.9 ಮೇಲ್ಮನವಿ

**ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ ಇವರ ಆದೇಶ ಅಥವಾ ನಿರ್ಧಾರದಿಂದ ಬಾಧಿತರಾದ ಯಾವುದೇ ಅಭ್ಯರ್ಥಿಗಳು, ಸಿಇಟಿ–2006 ನಿಯಮಗಳ ಅಡಿಯಲ್ಲಿ ವ್ಯಕ್ತವಾಗಿರುವಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ ಇವರ ಆದೇಶವನ್ನು 15 ದಿನಗಳೊಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ, ಕರ್ನಾಟಕ ಸರ್ಕಾರ ಇವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. ಕಾರ್ಯನಿರ್ವಾಹಕ ನಿರ್ದೇಶಕರಿಂದ ಸದರಿ ದಾಖಲೆಗಳನ್ನು ಪಡೆದು ಮತ್ತು ಅದನ್ನು ಪರಿಶೀಲಿಸಿದ ನಂತರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇವರು ನೀಡುವ ಆದೇಶಗಳು ಅಂತಿಮವಾಗಿರುತ್ತದೆ.**

## 1.10 ಕಾನೂನು ನ್ಯಾಯವ್ಯಾಪ್ತಿ

**ಪರೀಕ್ಷೆ ಅಥವಾ ನಂತರದ ಸೀಟು ಹಂಚಿಕೆ ಪ್ರಕ್ರಿಯೆ, ಶುಲ್ಕ, ಪ್ರವೇಶಕ್ಕೆ ಹಾಗು ಸೀಟು ರದ್ದು ಪಡಿಸುವುದಕ್ಕೆ ಸಂಬಂಧಿಸಿದಂತೆ ಉದ್ಭವಿಸಬಹುದಾದ ಯಾವುದೇ ವಿವಾದವು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಪ್ರಾಧಿಕಾರದಿಂದ ಕಾಲೇಜುಗಳ ಪ್ರವೇಶಕ್ಕೆ ನೀಡಲಾಗುವ ಆದೇಶಗಳು ಮತ್ತು ಕಾಲೇಜುಗಳಿಂದ ಮಾಡಲಾದ ಎಲ್ಲಾ ಪ್ರವೇಶಗಳು / ಹಂಚಿಕೆಗಳು ಅಂತಿಮವಾಗಿ ಸರ್ಕಾರದ / ವಿಶ್ವವಿದ್ಯಾಲಯ/ ಅಪೆಕ್ಸ್ ಸಂಸ್ಥೆಗಳ ಅನುಮೋದನೆಗೆ ಅರ್ಹತೆ ಮಾನದಂಡಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತವೆ.**

## 2.ಹಕ್ಕು ನಿರಾಕರಣೆ (DISCLAIMER)

2.1 ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜವಾಬ್ದಾರಿಯು ಕೌನ್ಸಿಲಿಂಗ್ ನಡೆಸುವುದು / ಆನ್‌ಲೈನ್ ನೊಂದಣಿ, ದಾಖಲೆಗಳ ಪರಿಶೀಲನೆ, ಆನ್‌ಲೈನ್ ಕೌನ್ಸಿಲಿಂಗ್ ಕ್ರಮ, ಸೀಟು ಹಂಚಿಕೆ ಮತ್ತು Seat Confirmation Slip ವಿತರಿಸುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ.

2.2 ಅರ್ಹತೆಗೆ ಸಂಬಂಧಿಸಿದ ಯಾವುದೇ ಸ್ಪಷ್ಟೀಕರಣಗಳ ಬಗ್ಗೆ ಕರ್ನಾಟಕ ವೃತ್ತಿಪರ ಶೈಕ್ಷಣಿಕ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 2006 (ಸಿಇಟಿ 2006 ಪ್ರವೇಶ ನಿಯಮಗಳು) ಮತ್ತು ಕಾಲಕಾಲಕ್ಕೆ ಪರಿಷ್ಕೃತವಾದ ನಿಯಮಗಳ ವಿವರಗಳನ್ನು ಹಾಗೂ ಇ–ಮಾಹಿತಿ ಬುಲೆಟಿನ್‌ನಲ್ಲಿನ ಸೂಚನೆಗಳು ಮತ್ತು ಮಾರ್ಗಸೂಚಿಗಳ ವಿವರಗಳು, ಪ್ರಸ್ತಾವಿತ ನಿಯಮಗಳು ಮತ್ತು ಸರ್ಕಾರಿ ಆದೇಶಗಳಿಗೆ ಒಳಪಟ್ಟಿರುತ್ತದೆ. ಈ ಸಂಬಂಧ ಪ್ರವೇಶ ನಿಯಮಗಳು ಮತ್ತು ಸರ್ಕಾರಿ ಆದೇಶಗಳು ಅಖೈರಾಗಿರುತ್ತವೆ (Said Admission Rules and Government orders prevail)

2.3 ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಭ್ಯರ್ಥಿಗಳು ಆನ್‌ಲೈನ್ ನೋಂದಣಿ ಮೂಲಕ ಸಲ್ಲಿಸಿರುವ ಮಾಹಿತಿಯನ್ನು ಪರಿಶೀಲಿಸುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳ ಉಮೇದುವಾರಿಕೆಯು **(candidature) ಕೇವಲ ತಾತ್ಕಾಲಿಕವಾಗಿದ್ದು, ಸಂಬಂಧಪಟ್ಟ ರಾಜ್ಯ ಸರ್ಕಾರ/ ವಿಶ್ವವಿದ್ಯಾಲಯ/ ಸಂಸ್ಥೆಗಳು/ ಡೀಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿರುವ ಒಳಪಟ್ಟಿರುತ್ತದೆ.**

2.4 ಕಾಲೇಜುಗಳಿಗೆ ಮತ್ತು ಕಾಲೇಜುಗಳಿಂದ ಮಾಡಲಾದ ಎಲ್ಲಾ ಪ್ರವೇಶಗಳು/ ಹಂಚಿಕೆಗಳು ಅಂತಿಮವಾಗಿ ಸರ್ಕಾರದ/ ವಿಶ್ವವಿದ್ಯಾಲಯ/ ಅಪೆಕ್ಸ್ ಸಂಸ್ಥೆಗಳ ಅನುಮೋದನೆಗೆ ಅರ್ಹತೆ ಮಾನದಂಡಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತವೆ.

2.5 ಅಭ್ಯರ್ಥಿಗಳು / ಪೋಷಕರು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ನೀಡಿರುವ ಮಾಹಿತಿ ಸುಳ್ಳಾಗಿದ್ದಲ್ಲಿ / ತಪ್ಪಾಗಿದ್ದಲ್ಲಿ / ಖೋಟಾ ಆಗಿದ್ದಲ್ಲಿ ಅಂಥ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾದ ಸೀಟನ್ನು ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಯ ವ್ಯಾಸಂಗದ ಅವಧಿಯಲ್ಲಿ ರದ್ದು ಮಾಡುವುದರೊಂದಿಗೆ ಅವರುಗಳ ವಿರುದ್ಧ ಕ್ರಿಮಿನಲ್ ವಿಚಾರಣೆಯನ್ನು ಸಿಇಟಿ–2006ರ ಪ್ರವೇಶ ನಿಯಮಗಳು, ನಿಯಮ 13 ರ ಅನ್ವಯ ಪ್ರಾರಂಭಿಸಲಾಗುವುದು.

2.6 ಅಭ್ಯರ್ಥಿತನವು ಸಂಪೂರ್ಣವಾಗಿ ತಾತ್ಕಾಲಿಕವಾಗಿದೆ ಮತ್ತು ನಿಯಮಗಳ ಅನುಸಾರ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ. ಇದಲ್ಲದೆ ಅಭ್ಯರ್ಥಿಯು ಪಡೆಯುವ ಪ್ರವೇಶವು ತಾತ್ಕಾಲಿಕವಾಗಿದ್ದು, ವಿವಿಧ ಸಕ್ಷಮ ಪ್ರಾಧಿಕಾರಗಳ ನಿಯಮಗಳಿಗೆ ಒಳಪಟ್ಟಿರುತ್ತದೆ.

2.7 ಪ.ಜಾ., ಪ.ಪಂ., ಪ್ರ.–1, ಹಾಗು 2ಎ, 2ಬಿ, 3ಎ, 3ಬಿ ಹಿಂದುಳಿದ ವರ್ಗಗಳ ಅರ್ಹತಾ ನಿಯಮಗಳು ಕರ್ನಾಟಕ ಮೂಲದವರಾದ ಅರ್ಹತಾ ಖಂಡ ಎ, ಬಿ, ಎಫ್, ಹೆಚ್, ಜೆ, ಕೆ, ಎಲ್ ಮತ್ತು ಒ ಅಡಿಯಲ್ಲಿ ಸರ್ಕಾರಿ ಸೀಟುಗಳಿಗೆ ಅರ್ಹತೆ ಹೊಂದುವವರಿಗೆ ಮಾತ್ರ ಅನ್ವಯಿಸುತ್ತವೆ ಮತ್ತು, ಸಿ, ಡಿ, ಇ, ಜಿ, ಐ, ಎಮ್ ಮತ್ತು ಎನ್ ಅರ್ಹತಾ ಖಂಡಗಳ ಅಡಿ ಅರ್ಹತೆ ಪಡೆಯುವವರಿಗೆ ಅನ್ವಯಿಸುವುದಿಲ್ಲ.

## 3 ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರಮ

3.1 ಇಂಜಿನಿಯರಿಂಗ್, ಆರ್ಕಿಟೆಕ್ಚರ್ ಮುಂತಾದ ಎಲ್ಲಾ ಕೋರ್ಸುಗಳಿಗೆ ಸೀಟು ಹಂಚಿಕೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುವುದು.

3.2 ಅಭ್ಯರ್ಥಿಯು ಮೊದಲನೆಯದಾಗಿ ವೆರಿಫಿಕೇಶನ್ ಸ್ಲಿಪ್ ಅನ್ನು ಪ್ರಾಧಿಕಾರದ ವೆಬ್ ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ವೆರಿಫಿಕೇಶನ್ ಸ್ಲಿಪ್‌ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳನ್ನು ಮುದ್ರಿಸಲಾಗಿರುತ್ತದೆ. (ಹೆಸರು, ಆದಾಯ, ಮತ್ತು ಇತರೆ ಮೀಸಲಾತಿ ವಿವರಗಳು)

3.3 ಈ ವೆರಿಫಿಕೇಶನ್ ಸ್ಲಿಪ್ ನಲ್ಲಿ ತೋರಿಸಿರುವ ಮೀಸಲಾತಿ ಕ್ಲೇಮ್ಸ್ ಗಳನ್ನು ಯಥಾವತ್ತಾಗಿ ಆನ್‌ಲೈನ್ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ. ಈ ಮೀಸಲಾತಿಯ ಆಧಾರದ ಮೇಲೆ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ, ಆದ್ದರಿಂದ ಮೀಸಲಾತಿ ವಿವರಗಳು / ಹಕ್ಕುಗಳನ್ನು ಕಡ್ಡಾಯವಾಗಿ ಪರಿಶೀಲಿಸಿ.

3.4 ವೆರಿಫಿಕೇಶನ್ ಸ್ಲಿಪ್ ನಲ್ಲಿ ಯಾವುದೇ ವ್ಯತ್ಯಾಸವಿದ್ದರೆ, ದಾಖಲೆಗಳು ಮತ್ತು ಅರ್ಜಿಯನ್ನು ಪರಿಶೀಲಿಸಲು ಸ್ಲಾಟ್ ಅನ್ನು ಬುಕ್ ಮಾಡುವ ಮೂಲಕ KEA ಅನ್ನು ಸಂಪರ್ಕಿಸಿ. (ಮೊದಲನೇ ಸುತ್ತಿನ ಸೀಟು ಹಂಚಿಕೆ ಪ್ರಾರಂಭಿಸುವ ಮುನ್ನ)

3.5 ಒದಗಿಸಿದ ವಿವರಗಳಲ್ಲಿ ಮತ್ತು ಕ್ಲೇಮ್ಸ್ ಗಳಲ್ಲಿ ವ್ಯತ್ಯಾಸವಿದ್ದರೂ, ಅದನ್ನು KEA ಗಮನಕ್ಕೆ ತರದಿದ್ದಲ್ಲಿ ಅಭ್ಯರ್ಥಿಯೇ ಜವಾಬ್ದಾರನಾಗಿರುತ್ತಾನೆ.

3.6 ಯಾವ ಕಾಲೇಜಿನಲ್ಲಿ ಯಾವ ಕೋರ್ಸ್‌ಗಳು ಇದೆ, ಎಷ್ಟು ಸಂಖ್ಯೆಯ ಕೋರ್ಸುಗಳು ಇದೆ, ಮೀಸಲಾತಿ ಸೀಟುಗಳ ಸಂಖ್ಯೆ, ಇತ್ಯಾದಿ ವಿವರಗಳನ್ನು ಸರ್ಕಾರವು ಕ್ರೋಢೀಕರಿಸಿ ಪ್ರಾಧಿಕಾರಕ್ಕೆ ನೀಡುವುದು. ಇದನ್ನು ಸೀಟ್ ಮ್ಯಾಟ್ರಿಕ್ಸ್ ಎಂದು ಕರೆಯುತ್ತಾರೆ. ಪ್ರಾಧಿಕಾರ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

3.7 ಇದೇ ಮಾದರಿಯಲ್ಲಿ ಸರ್ಕಾರವು ಎಲ್ಲಾ ಕೋರ್ಸ್‌ಗಳಿಗೆ ಶುಲ್ಕವನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸುತ್ತದೆ. ಕಾಲೇಜುಗಳ / ಕೋರ್ಸ್‌ಗಳ ಆಯ್ಕೆಗೆ ಮೊದಲು ಅಭ್ಯರ್ಥಿಯು ಶುಲ್ಕವನ್ನು ಗಮನಿಸಿಕೊಳ್ಳಬೇಕು.

3.8 ವಿವಿಧ ಸುತ್ತುಗಳ ಸೀಟು ಹಂಚಿಕೆಯನ್ನು ಪ್ರಾರಂಭಿಸುವ ಮೊದಲು ಪ್ರಾಧಿಕಾರದ ವೆಬ್ ಸೈಟಿನಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು.

| PROCESS | DETAILS |
|---|---|
| Verification Slip | ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಆಯ್ಕೆ ಮಾಡಿ ಅಭ್ಯರ್ಥಿಗಳು ಅಗತ್ಯ ವಿವರಗಳನ್ನು ದಾಖಲಿಸಿ ವೆರಿಫಿಕೇಶನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. |
| Option entry | Option Entry ಪೋರ್ಟಲ್ ನಲ್ಲಿ ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಬಹುದು. Options ಗಳನ್ನು ದಾಖಲಿಸಲು ಸುಮಾರು ಕನಿಷ್ಠ ಎಂಟು–ಹತ್ತು (8–10) ದಿನಗಳ ಕಾಲಾವಕಾಶವನ್ನು ನೀಡಲಾಗುವುದು. |
| Mock Results & further | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದ 4 ದಿನಗಳ ನಂತರ ಅಣುಕು ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಲಾಗುವುದು. |
| | ಅಣುಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಇಚ್ಛೆ–ಆಯ್ಕೆಗಳನ್ನು, ಸೇರಿಸಲು / ಅಳಿಸಲು / ಬದಲಾಯಿಸಲು / ಮಾರ್ಪಡಿಸಲು 3 ದಿನಗಳ ಕಾಲಾವಕಾಶ ನೀಡಲಾಗುವುದು. |
| Real Results | ಈ ಮೇಲಿನ ಪ್ರಕ್ರಿಯೆ ಮುಕ್ತಾಯವಾದ 3 ದಿನಗಳ ನಂತರ ಸೀಟು ಹಂಚಿಕೆಯ ನೈಜ ಫಲಿತಾಂಶವನ್ನು ಪ್ರಕಟಿಸಲಾಗುವುದು. |

## 4. ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು (Options) ನಮೂದಿಸಲು ಪ್ರಾರಂಭಿಕ ಹಂತಗಳು

**a)** ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ ನಲ್ಲಿ "ಪ್ರವೇಶ" ಅನ್ನುವ ಟ್ಯಾಬ್ ಆಯ್ಕೆ ಮಾಡಿ, ನಂತರ "ಡಿಸಿಇಟಿ–2026" ನಲ್ಲಿ ``DCET-2026-OPTION ENTRY" ಎನ್ನುವ ಲಿಂಕ್ ಅನ್ನು ಆಯ್ಕೆ ಮಾಡಿದಲ್ಲಿ **ಇಚ್ಛೆಗಳನ್ನು (Options) ನಮೂದಿಸುವ ಲಾಗಿನ್ ಪರದೆ ನಿಮಗೆ** ಕಂಡುಬರುತ್ತದೆ.

**b)** ಅಭ್ಯರ್ಥಿಯ ವೆರಿಫಿಕೇಶನ್ ಸ್ಲಿಪ್ ನಲ್ಲಿ ಮುದ್ರಿಸಿರುವ QR Code ಅನ್ನು ಸ್ಕ್ಯಾನ್ ಮಾಡಬೇಕು. ನಂತರ ಆನ್‌ಲೈನ್ ಅರ್ಜಿಯ ಸಂಖ್ಯೆ ಮತ್ತು ವೆರಿಫಿಕೇಶನ್ ಸ್ಲಿಪ್ ನಲ್ಲಿ ನೀಡಿರುವ OPTION ENTRY ಸಿಇಟಿ ಸಂಖ್ಯೆಯನ್ನು ದಾಖಲಿಸಬೇಕು.

**c)** ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಸ್ವೀಕರಿಸಿದ OTP ಯನ್ನು ನಮೂದಿಸಬೇಕು. ನಂತರ Verify OTP ಯನ್ನು ಕ್ಲಿಕ್ ಮಾಡಬೇಕು.

**d)** ನಂತರ ಅಭ್ಯರ್ಥಿಯ Live Photo ಅನ್ನು Capture ಮಾಡುವ ಮೂಲಕ OPTION ENTRY ಲಾಗಿನ್ ಮಾಡಬೇಕು.

**e)** ನಂತರ ಅಭ್ಯರ್ಥಿಗಳು ರೂ.750/– (ಏಳನೂರು ಐವತ್ತು ರೂಪಾಯಿಗಳು) ಅನ್ನು ಪಾವತಿಸಲು ಅನ್ನುವ ಲಿಂಕ್ ಅನ್ನು ಆಯ್ಕೆ ಮಾಡಿ, ವಿವಿಧ ಗೇಟ್ ವೇ ಗಳ ಮೂಲಕ ಪಾವತಿಸುವುದು. (ಎಲ್ಲಾ ವರ್ಗದ ಅಭ್ಯರ್ಥಿಗಳು ರೂ.750/– ಅನ್ನು ಪಾವತಿಸಬೇಕು)

**f)** ಅಭ್ಯರ್ಥಿಗಳು ರೂ.750/– ಅನ್ನು ಪಾವತಿಸಿರುವುದು ದೃಢೀಕರಣಗೊಂಡ ನಂತರವೇ Candidates Option Entry ಎನ್ನುವುದು ಸಕ್ರಿಯಗೊಳ್ಳುತ್ತದೆ ಹಾಗೂ ಅಭ್ಯರ್ಥಿಗಳು Option Entry ಮಾಡಲು ಅನುವು ಮಾಡಿಕೊಡುತ್ತದೆ.

### 4.1 ವಿದ್ಯಾರ್ಥಿಯು ತನ್ನ ಆದ್ಯತೆಯ ಇಚ್ಛೆಗಳನ್ನು (Options) ಯಾವಾಗ ನಮೂದಿಸಬಹುದು?

ಪರಿಶೀಲನೆಯ ನಂತರ ಅರ್ಹರಾಗುವ ವಿದ್ಯಾರ್ಥಿಗಳನ್ನು ಮಾತ್ರ, ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು. ಇಚ್ಛೆಗಳನ್ನು **(Options)** ನಮೂದಿಸುವುದನ್ನು ಆರಂಭಿಸುವುದಕ್ಕಾಗಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯವನ್ನು ಕ.ಪ.ಪ್ರಾ.ದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಈ ಬಗ್ಗೆ ಗಮನಹರಿಸುತ್ತಿರಬೇಕು ಮತ್ತು ಇಚ್ಛೆಯನ್ನು ನಮೂದಿಸುವುದಕ್ಕೆ ನಿಗದಿಪಡಿಸಿದ ಸಮಯ ಹಾಗೂ ಕೊನೆಯ ದಿನಾಂಕದ ಒಳಗಾಗಿ ಅವರು ತಮ್ಮ ಇಚ್ಛೆಗಳನ್ನು ನಮೂದಿಸಬೇಕು. ಇಚ್ಛೆಯನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿದ ವೇಳಾಪಟ್ಟಿ ಗೊತ್ತಾಗಲಿಲ್ಲ; ಆದ್ದರಿಂದ, ನಿಗದಿಪಡಿಸಿದ ಸಮಯ ಮತ್ತು ದಿನಾಂಕದ ಒಳಗೆ ತನ್ನ ಇಚ್ಛೆಗಳನ್ನು ನಮೂದಿಸಲು ಆಗಲಿಲ್ಲ; ಹಾಗಾಗಿ, ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ತಮಗೆ ಅವಕಾಶ ನೀಡಬೇಕು ಎಂದು ಯಾರೇ ವಿದ್ಯಾರ್ಥಿಗಳು ಕೋರಿದರೆ, ಅದಕ್ಕೆ ಕ.ಪ.ಪ್ರಾ. ಅವಕಾಶ ನೀಡುವುದಿಲ್ಲ ಮತ್ತು ಇದಕ್ಕಾಗಿ ಪ್ರಾಧಿಕಾರವು ಯಾವುದೇ ಹೊಣೆ ಹೊತ್ತು ಕೊಳ್ಳುವುದಿಲ್ಲ.

### 4.2 ಇಚ್ಛೆಗಳನ್ನು (Options) ನಮೂದಿಸುವ ಮೊದಲು ಮನೆಯಲ್ಲಿ ಮಾಡಬೇಕಾದ ಪೂರ್ವಸಿದ್ಧತಾ ಕಾರ್ಯ

ಗಮನಿಸಿ: ವಿದ್ಯಾರ್ಥಿಗಳು, ಯಾವ ಆಯ್ಕೆಗಳನ್ನು ನಮೂದಿಸಬೇಕು ಎನ್ನುವುದನ್ನು ಕುರಿತು ಮನೆಯಲ್ಲಿ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳದೇ ನೇರವಾಗಿ ಅಂತರ್‌ಜಾಲದ ಆನ್‌ಲೈನ್ ಇಚ್ಛೆ ನಮೂನೆಯಲ್ಲಿ ತಮ್ಮ ಇಚ್ಛೆಗಳನ್ನು ನಮೂದಿಸಲು ತೊಡಗಬಾರದು ಎಂದು ಸಲಹೆ ನೀಡಲಾಗಿದೆ. ಹೀಗೆ ಮಾಡುವುದರಿಂದ, ಲೋಪಗಳು ಉಂಟಾಗುವುದಕ್ಕೆ / ತಪ್ಪು ನಮೂದುಗಳನ್ನು ಮಾಡುವುದಕ್ಕೆ / ಆದ್ಯತೆಗಳ ತಪ್ಪು ಕ್ರಮವನ್ನು ನಮೂದಿಸುವುದಕ್ಕೆ ಕಾರಣವಾಗುತ್ತದೆ.

I. **ಕಾಲೇಜು ಪೋರ್ಟಲ್:** ಕಾಲೇಜು ಹೊಂದಿರುವ ಮೂಲಸೌಕರ್ಯಗಳು ಮತ್ತು ಕೋರ್ಸುಗಳು, ಅದು ನೀವು ಇರುವ ಸ್ಥಳದಿಂದ ಎಷ್ಟು ದೂರದಲ್ಲಿದೆ ಎನ್ನುವ ವಿಚಾರ, ವಾಹನ ಸೌಲಭ್ಯ, ವಿದ್ಯಾರ್ಥಿನಿಲಯದಲ್ಲಿ ಸೀಟು ದೊರೆಯುವಿಕೆ, ಗ್ರಂಥಾಲಯ ಮುಂತಾದ ವಿವರಗಳನ್ನು ಕಾಲೇಜಿನವರು ದಾಖಲಿಸಿದಂತೆ ಪ್ರದರ್ಶಿಸಲಾಗುತ್ತದೆ. ಅಭ್ಯರ್ಥಿಗಳು ಇದರ ಸದುಪಯೋಗವನ್ನು ಮಾಡಿಕೊಳ್ಳಬಹುದು.

II. ತಮ್ಮ ಕಾಲೇಜು ಆಯ್ಕೆಯ ಇಚ್ಛೆಗಳನ್ನು ಕುರಿತು ತಮ್ಮ ತಂದೆ–ತಾಯಿಗಳು / ಪೋಷಕರು / ಹಿತೈಷಿಗಳೊಂದಿಗೆ ಚರ್ಚಿಸಬೇಕು.

ಸೀಟುಗಳ ಹಂಚಿಕೆಯನ್ನು ಸಂಪೂರ್ಣವಾಗಿ, ವಿದ್ಯಾರ್ಥಿಗಳು ನೀಡುವ ಇಚ್ಛೆಗಳ ಆದ್ಯತೆಯ ಮೇಲೆ ಅವರ ಮೆರಿಟ್/ರ್‍ಯಾಂಕ್‌ಗೆ ಅನುಸಾರವಾಗಿ ಮಾಡಲಾಗುತ್ತದೆ. ಆದ್ದರಿಂದ, ಕಂಪ್ಯೂಟರ್ ಬಳಸುವುದನ್ನು, Options ನೀಡುವುದನ್ನು ಕುರಿತು ವಿದ್ಯಾರ್ಥಿ ತಾನೇ ಚೆನ್ನಾಗಿ ತಿಳಿದುಕೊಳ್ಳುವುದು ಅತ್ಯಂತ ಮಹತ್ವದ ವಿಚಾರವಾಗಿದೆ. ಇದರಿಂದ, ಅವರು ತಮ್ಮ ಸರಿಯಾದ ಇಚ್ಛೆ (Options) ಗಳನ್ನು ಮತ್ತು ಆಯ್ಕೆ (**CHOICE**) ಗಳನ್ನು ನಮೂದಿಸುವುದಕ್ಕೆ ಸಾಧ್ಯವಾಗುತ್ತದೆ. ಕಂಪ್ಯೂಟರ್ ಬಳಸುವುದರಲ್ಲಿ ನಿಷ್ಣಾತನಾಗಿರುವ ವ್ಯಕ್ತಿಗೂ ಕೂಡ ಸುಮಾರು 500 ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಕನಿಷ್ಠ ಒಂದು ಗಂಟೆ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ, ತಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕೆ ಸಂಬಂಧಿಸಿದಂತೆ ಪೂರ್ವಾಭ್ಯಾಸ ಮಾಡುವುದು ಅತ್ಯಂತ ಅಗತ್ಯವಾಗಿರುತ್ತದೆ. ಕಂಪ್ಯೂಟರ್ ಅನ್ನು ಚೆನ್ನಾಗಿ ಬಳಸುವುದಕ್ಕೆ ಸಂಬಂಧಿಸಿದಂತೆ ಹೊಂದಿರುವ ಜ್ಞಾನ, ಕಾಲೇಜು ಮತ್ತು ಕೋರ್ಸುಗಳಿಗೆ ಸಂಬಂಧಿಸಿದಂತೆ ಸರಿಯಾದ ಮಾಹಿತಿಯನ್ನು ಮೊದಲೇ ಹೊಂದಿರುವುದು, ಇಚ್ಛೆಗಳನ್ನು ತುಂಬುವುದಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವ ಸಂಗತಿಗಳಾಗಿವೆ. ಇಚ್ಛೆಯನ್ನು ನಮೂದಿಸುವಾಗ ಎಸಗುವ ಒಂದೇ ಒಂದು ಸಣ್ಣ ತಪ್ಪು ಕೂಡ, ವಿದ್ಯಾರ್ಥಿ/ನಿ ಗಳಿಸಿರುವ ರ್‍ಯಾಂಕ್‌ಗೆ ಅನುಸಾರವಾಗಿ ಆತ/ ಆಕೆ ಇಚ್ಛಿಸುವ ಅತ್ಯಂತ ಅಮೂಲ್ಯವಾದ ಕಾಲೇಜು/ ಕೋರ್ಸು ಅವರಿಗೆ ಸಿಗದಂತೆ ಮಾಡಿಬಿಡಬಹುದು. ಆದ್ದರಿಂದ ಕ.ಪ.ಪ್ರಾ.ವು ಆನ್‌ಲೈನ್‌ನಲ್ಲಿ ಇಚ್ಛೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಿರುವ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳೇ ಸ್ವತಃ ಚೆನ್ನಾಗಿ ತಿಳಿದುಕೊಳ್ಳುವುದು ಅತ್ಯಂತ ಸೂಕ್ತವೆಂದು ಸಲಹೆ ನೀಡುತ್ತದೆ. ಹಂಚಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿವಳಿಕೆ ಬರಬೇಕಾದರೆ, ಅವರು ಮನೆಯಲ್ಲಿ ಪ್ರತಿದಿನ ಕನಿಷ್ಠ ಒಂದು ಗಂಟೆಯಷ್ಟಾದರೂ ಈ ಕುರಿತು ಅಭ್ಯಾಸ ಮಾಡಬೇಕಿರುತ್ತದೆ. ವಿದ್ಯಾರ್ಥಿಗಳು, ಆನ್‌ಲೈನ್‌ನ ಇಚ್ಛೆ ನಮೂನೆಯಲ್ಲಿ ತಮ್ಮ ಇಚ್ಛೆಗಳನ್ನು ಈ ಕೆಳಗಿನ ಕ್ರಮಗಳನ್ನು ಅನುಸರಿಸಿ ನಮೂದಿಸಬಹುದಾಗಿದೆ.

III. ವಿದ್ಯಾರ್ಥಿಗಳು ತಾವು ಇಷ್ಟಪಡುವ ಕಾಲೇಜು, ಆಸಕ್ತಿ ಹೊಂದಿರುವ ಕೋರ್ಸು ಮೊದಲಾದವುಗಳಿಗೆ ಸಂಬಂಧಿಸಿದಂತೆ, ಮನೆಯಲ್ಲಿ ಪೂರ್ವಾಭ್ಯಾಸ ಮಾಡುವಂತೆ ಸಲಹೆ ನೀಡಲಾಗಿದೆ. ತಮ್ಮ ಇಚ್ಛೆಗಳನ್ನು ಕಂಪ್ಯೂಟರ್‌ನಲ್ಲಿ ನಮೂದಿಸುವುದಕ್ಕೆ ಮೊದಲು, ಅವುಗಳಲ್ಲಿ ಯಾವುವು ತಮಗೆ ಹೆಚ್ಚು ಇಷ್ಟವಾದ ಇಚ್ಛೆಗಳಾಗಿರುತ್ತವೋ ಅವುಗಳನ್ನು, ಒಂದರ ನಂತರ ಇನ್ನೊಂದರಂತೆ ಒಂದು ಬಿಳಿಯ ಹಾಳೆಯ ಮೇಲೆ ಬರೆದುಕೊಳ್ಳಬೇಕು ಮತ್ತು ಆದ್ಯತಾ ಸಂಖ್ಯೆಗಳನ್ನು ನೀಡಬೇಕು.

- ವಿದ್ಯಾರ್ಥಿಯು, ಅಧಿಸೂಚನೆಯಲ್ಲಿ ನೀಡಿರುವ ಕಾಲೇಜಿನ ಹೆಸರು ಮತ್ತು ಕೋರ್ಸುಗಳನ್ನು ಒಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆದುಕೊಳ್ಳಬೇಕು.
- ಒಂದು ನಿರ್ದಿಷ್ಟ ಕಾಲೇಜಿಗೆ ಮತ್ತು ಕೋರ್ಸಿಗೆ ಸಂಬಂಧಿಸಿದ ಹಿಂದಿನ ವರ್ಷಗಳ / ಸುತ್ತುಗಳ ಕಟ್‌ಆಫ್‌ರ್‍ಯಾಂಕ್ (ಕೊನೆಯ ರ್‍ಯಾಂಕ್) ಅನ್ನು ನೋಡಬಹುದಾಗಿದೆ. ಇದರಿಂದ ವಿದ್ಯಾರ್ಥಿಗೆ ತನಗೆ ಅಥವಾ ತನ್ನ ರ್‍ಯಾಂಕ್‌ಗೆ ಯಾವ ಕಾಲೇಜು ಅಥವಾ ಯಾವ ಕೋರ್ಸ್ ಸಿಗಬಹುದು ಎನ್ನುವ ಒಂದು ಪೂರ್ವ ಕಲ್ಪನೆ ಸಿಗುತ್ತದೆ.

- ವಿದ್ಯಾರ್ಥಿ/ನಿ, ತನಗೆ ದೊರೆಯುವ ಮೆರಿಟ್/ ರ್‍ಯಾಂಕ್‌ನ ಕ್ರಮಸಂಖ್ಯೆಯನ್ನು ಖಚಿತಪಡಿಸಿಕೊಂಡ ನಂತರ ಮಾತ್ರವೇ, ಮನೆಯಲ್ಲಿ ಮಾಡಬೇಕಿರುವ ಪೂರ್ವಭಾವಿ ಸಿದ್ಧತೆಯನ್ನು ಆರಂಭಿಸಬೇಕು.
- ಆಯ್ಕೆ ಮಾಡಿಕೊಂಡ ಕಾಲೇಜುಗಳ ಪೈಕಿ ಇಚ್ಛೆಗಳ ಆದ್ಯತೆಯನ್ನು ಬರೆದಿಟ್ಟುಕೊಳ್ಳಬೇಕು.
- ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಹ, ವಿದ್ಯಾರ್ಥಿಗಳು ತಮ್ಮ ಆಯ್ಕೆಗೆ ಅನುಸಾರವಾಗಿ ಇಚ್ಛೆಗಳನ್ನು ನಮೂದಿಸುವುದನ್ನು ಕುರಿತು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವಂತೆ ಮಾಡುವ ದೃಷ್ಟಿಯಿಂದ ಅವರಿಗೆ ಅಭ್ಯಾಸದ ಕಾರ್ಯಕ್ರಮವನ್ನು ನಡೆಸುತ್ತದೆ.
- ಮೊದಲನೇ ಸುತ್ತು (ನೈಜಸುತ್ತು) ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ, ವಿದ್ಯಾರ್ಥಿಗಳು ನೀಡಿರುವ ವಾಸ್ತವಿಕವಾದ ಇಚ್ಛೆಗಳ ಮಾಹಿತಿಯನ್ನು ಆಧರಿಸಿ, ಒಂದು ಅಣಕು ಸೀಟು ಹಂಚಿಕೆಯನ್ನು (Mock Seat Allotment) ಸಹ ಮಾಡಲಾಗುವುದು. ಇದರಿಂದ, ವಿದ್ಯಾರ್ಥಿ/ನಿಗೆ ತಾನು ನೀಡಿರುವ ಇಚ್ಛೆಗಳಿಗೆ ಅನುಸಾರವಾಗಿ ಹೇಗೆ ಕಾಲೇಜು ಮತ್ತು ಕೋರ್ಸನ್ನು ಹಂಚಿಕೆ ಮಾಡಲಾಗುವುದು ಎನ್ನುವುದು ಗೊತ್ತಾಗುತ್ತದೆ.
- ಅಣಕು ಹಂಚಿಕೆಯನ್ನು ನೋಡಿದ ನಂತರವೂ ಸಹ, ವಿದ್ಯಾರ್ಥಿಯು ತನ್ನ ಇಚ್ಛೆಗಳನ್ನು ಬದಲಾಯಿಸಬಹುದಾಗಿದೆ. ಇದರಿಂದ, ತಾವು ಹೊಂದಿರುವ ಮೆರಿಟ್ ಮತ್ತು ನಮೂದಿಸಿರುವ ಇಚ್ಛೆಗಳಿಗೆ ಅನುಸಾರವಾಗಿ, ತಮಗೆ ಪ್ರಾಯಶಃ ಯಾವ ಸೀಟು ದೊರೆಯಬಹುದು ಎನ್ನುವುದನ್ನು ಅವರು ಕಂಡುಕೊಳ್ಳುವುದಕ್ಕೆ ನೆರವಾಗುತ್ತದೆ. ಅಣಕು ಸೀಟು ಹಂಚಿಕೆಯು, ಕೋರ್ಸು ಮತ್ತು ಕಾಲೇಜನ್ನು ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಕುರಿತು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡಲು ಮತ್ತು ತೋರಿಸಿಕೊಡಲು ಆಯೋಜಿಸುವ ಒಂದು ವಿದ್ಯಾರ್ಥಿ ಸ್ನೇಹಿಯಾದ ಕ್ರಮವಾಗಿದೆಯೇ ಹೊರತು, ನಿಜವಾಗಿ ಸೀಟುಗಳನ್ನು ಹಂಚಿಕೆ ಮಾಡುವಾಗ ಅವರಿಗೆ ಅದೇ ಸೀಟು ಮತ್ತು ಕಾಲೇಜನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಅವರು ಯಾವುದೇ ರೀತಿಯಲ್ಲೂ ಊಹಿಸಿಕೊಳ್ಳಬಾರದು. ಏಕೆಂದರೆ, ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆ ನಂತರ, ಸಹ ವಿದ್ಯಾರ್ಥಿಗಳು ತಾವು ನಮೂದಿಸಿರುವ ಇಚ್ಛೆಗಳ ಆದ್ಯತೆಯನ್ನು ಬದಲಾಯಿಸಿಕೊಳ್ಳುವ ಅವಕಾಶ ಹೊಂದಿರುತ್ತಾರೆ.
- ವಿದ್ಯಾರ್ಥಿಗಳಿಗೆ ನೀಡಲಾಗುವ ಪರಿಶೀಲನಾ ಚೀಟಿಯು, ಆತ/ ಆಕೆ ಯಾವ ಪ್ರವರ್ಗಕ್ಕೆ ಸೇರಿದವರಾಗಿದ್ದಾರೆ, ಆತ/ ಆಕೆ ಯಾವ ಡಿಸಿಪ್ಲಿನ್‌ಗೆ ಅರ್ಹರಾಗಿರುವರೋ ಅಂಥ ಪ್ರತಿಯೊಂದು ಡಿಸಿಪ್ಲಿನ್‌ನಲ್ಲಿ ಗಳಿಸಿರುವಂತಹ ರ್‍ಯಾಂಕ್ ಸಂಖ್ಯೆ ಮತ್ತು ಯಾವುದಾದರೂ ವಿಶೇಷ ಪ್ರವರ್ಗಕ್ಕೆ ಸಂಬಂಧಿಸಿದ್ದರೆ ಅದರ ಮಾಹಿತಿ, ಮೊದಲಾದ ವಿವರಗಳನ್ನು ಒಳಗೊಂಡಿರುತ್ತದೆ. ಅದು, ಕಾಲೇಜನ್ನು ಅಥವಾ ಕೋರ್ಸನ್ನು ಅಥವಾ ಕಾಲೇಜಿನ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ನೆರವಾಗುತ್ತದೆ.

## 4.3 ಕಟ್ ಆಫ್ ರ್‍ಯಾಂಕ್ (ಕೊನೆಯ ಕನಿಷ್ಟ ರ್‍ಯಾಂಕ್):

2025ನೇ ವರ್ಷದ ಮತ್ತು ಅದರ ಹಿಂದಿನ ವರ್ಷಗಳ ಎಲ್ಲಾ ಡಿಸಿಪ್ಲಿನ್‌ಗಳಿಗೆ ಸಂಬಂಧಿಸಿದ ಕಾಲೇಜುವಾರು, ಕೋರ್ಸುವಾರು ಮತ್ತು ಪ್ರವರ್ಗವಾರು ಕಟ್–ಆಫ್ ರ್‍ಯಾಂಕ್‌ಗಳನ್ನು, ಕ.ಪ.ಪ್ರಾ.ದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಕಟ್–ಆಫ್ ರ್‍ಯಾಂಕ್, 2025ನೇ ವರ್ಷಕ್ಕೆ ಸಂಬಂಧಿಸಿದಂತೆ, ಕಾಲೇಜಿನ ಹೆಸರು, ಕೋರ್ಸು, ಪ್ರವರ್ಗ ಮತ್ತು ಒಂದು ಕೋರ್ಸಿಗೆ ನಿರ್ದಿಷ್ಟ ಕಾಲೇಜಿನಲ್ಲಿ ಪ್ರವೇಶ ನೀಡಲಾಗಿರುವ ಕೊನೆಯ ರ್‍ಯಾಂಕನ್ನು ತೋರಿಸುತ್ತದೆ. **ಈ ಕಟ್–ಆಫ್ ರ್‍ಯಾಂಕ್ ಅನ್ನು, ವಿದ್ಯಾರ್ಥಿಗಳ ಮಾಹಿತಿಗಾಗಿ ಮಾತ್ರ ನೀಡಲಾಗಿರುತ್ತದೆ. ಆದ್ದರಿಂದ, ಇದನ್ನು 2026ನೇ ಸಾಲಿಗೆ ಸಂಬಂಧಿಸಿದಂತೆ ಕಾಲೇಜುವಾರು ಮತ್ತು ಕೋರ್ಸುವಾರು ಲಭ್ಯವಿರುವ ಸೀಟುಗಳ ಕುರಿತು ಯಾವುದೇ ಊಹೆಯನ್ನು ಮಾಡಿಕೊಳ್ಳುವುದಕ್ಕೆ ಬಳಸಬಾರದು. ಈ ಸಂಬಂಧ ಕ.ಪ.ಪ್ರಾ. ಯಾವುದೇ ರೀತಿಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದಿಲ್ಲ.** ಈ ಕಟ್–ಆಫ್ ರ್‍ಯಾಂಕ್ ಹಿಂದಿನ ವರ್ಷಾವಧಿಯಲ್ಲಿ, ಒಂದು ನಿರ್ದಿಷ್ಟ ಕಾಲೇಜಿಗೆ / ಕೋರ್ಸಿಗೆ ಹಂಚಿಕೆಯಾದ ಪ್ರತಿಯೊಂದು ಪ್ರವರ್ಗದ ಅಡಿಯಲ್ಲಿನ ಕೊನೆಯ ರ್‍ಯಾಂಕಿನ ಬಗೆಗೆ ಒಂದು ಸ್ಪಷ್ಟವಾದ ಕಲ್ಪನೆಯನ್ನು ಕೊಡುತ್ತದೆ. ಆದ್ದರಿಂದ, ಕಟ್–ಆಫ್ ರ್‍ಯಾಂಕುಗಳ ಆಧಾರದ ಮೇಲೆ ನಿಮ್ಮ ಇಚ್ಛೆಗಳನ್ನು ನೀಡಬೇಡಿ. ಏಕೆಂದರೆ ಕಟ್–ಆಫ್ ರ್‍ಯಾಂಕುಗಳು ಪ್ರತಿ ವರ್ಷ ಒಂದೇ ಆಗಿರುವುದಿಲ್ಲ. ಆದ್ದರಿಂದ, ಒಂದು ಕಾಲೇಜಿಗೆ/ ಕೋರ್ಸಿಗೆ ಸಂಬಂಧಿಸಿದಂತೆ ನಿಮಗಿರುವ ಆಸಕ್ತಿಯನ್ನಾಧರಿಸಿ ಮಾತ್ರ ಇಚ್ಛೆಗಳನ್ನು ನೀಡಿ. ವಿದ್ಯಾರ್ಥಿ/ನಿಯು ತಾನು ಪ್ರವೇಶ ಪಡೆಯಬಯಸುವ ಯಾವುದೇ ಕಾಲೇಜು / ಕೋರ್ಸನ್ನು ಬಿಟ್ಟಿರುವುದಿಲ್ಲ ಹಾಗೂ ಅದನ್ನು ಆದ್ಯತೆಗೆ ಅನುಸಾರವಾಗಿ ಅದೇ ಅನುಕ್ರಮದಲ್ಲಿ ನಮೂದಿಸಲಾಗಿರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

IV. ನೀವು ಈ ಎಲ್ಲಾ ಪೂರ್ವಭಾವಿ ಪ್ರಯತ್ನಗಳನ್ನು ಮಾಡುವುದರಿಂದ ಆನ್‌ಲೈನ್‌ನಲ್ಲಿ ಇಚ್ಛೆಗಳನ್ನು ನಮೂದಿಸುವ ಸಮಯದಲ್ಲಿ ನಿಮ್ಮ ಸಮಯ ಉಳಿಯುತ್ತದೆ ಮತ್ತು ನೀವು ತಪ್ಪು ಮಾಡುವ ಸಾಧ್ಯತೆಗಳು ಕಡಿಮೆಯಾಗುತ್ತದೆ. **ಒಬ್ಬ ವಿದ್ಯಾರ್ಥಿ, ತನ್ನ ಇಚ್ಛಾನುಸಾರವಾಗಿ ಮಾಡಿಕೊಂಡಿರುವ ಕ್ರಮದಲ್ಲಿ, ತನ್ನ ಇಚ್ಛೆಯ ಕಾಲೇಜು/ ಕಾಲೇಜುಗಳು ಮತ್ತು ಕೋರ್ಸುಗಳಿಗೆ ಆನ್‌ಲೈನ್ (ಅಂತರ್ಜಾಲದ) ಮೂಲಕ ಎಷ್ಟು ಬೇಕೋ ಅಷ್ಟು ಸಂಖ್ಯೆಯಲ್ಲಿ ಇಚ್ಛೆಗಳನ್ನು ನಿಗದಿಪಡಿಸುವ ವೇಳಾಪಟ್ಟಿಗನುಸಾರವಾಗಿ ನಮೂದಿಸಬಹುದಾಗಿರುತ್ತದೆ.**

## 4.4 ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು (Options) ನಮೂದಿಸುವ ವಿಧಾನಗಳು

V. ವಿದ್ಯಾರ್ಥಿ/ನಿಯು, ಇಚ್ಛೆ ನಮೂದಿಸುವುದಕ್ಕಾಗಿ ಇರುವ ನಮೂನೆಯಲ್ಲಿ ಮೊದಲಿಗೆ, ಡಿಸಿಪ್ಲಿನ್‌ಅನ್ನು ಆಯ್ಕೆ ಮಾಡಿಕೊಳ್ಳಬೇಕು.

VI. ಡಿಸಿಪ್ಲಿನ್‌ಅನ್ನು ಆಯ್ಕೆ ಮಾಡಿಕೊಂಡ ನಂತರ, ನಮೂದಿಸುವುದಕ್ಕಾಗಿ ಇರುವ ನಮೂನೆಯು ಇಂಜಿನಿಯರಿಂಗ್, ವಾಸ್ತುಶಿಲ್ಪಶಾಸ್ತ್ರದ ಕೋರ್ಸುಗಳ ಕಾಲೇಜುಗಳ ಪಟ್ಟಿಯನ್ನು ತೋರಿಸುತ್ತದೆ. ಆಗ ವಿದ್ಯಾರ್ಥಿ/ನಿಯು, ಪ್ರದರ್ಶಿತವಾಗುವ ಕಾಲೇಜು/ ಕೋರ್ಸಿನ ಪೈಕಿ ತಾನು ಯಾವ ಕಾಲೇಜು/ ಕೋರ್ಸಿಗೆ ಅರ್ಹನಾಗಿರುವನೋ/ಳೋ, ಅದರ ಮುಂದೆ ಆದ್ಯತೆಯ ಸಂಖ್ಯೆಯನ್ನು ನಮೂದಿಸಬೇಕು.

VII. ಅಂದರೆ, ಸಂಪೂರ್ಣ 100% ಇಷ್ಟವಿರುವ ಕಾಲೇಜಿಗೆ ಹಾಗೂ ಆ ಕೋರ್ಸಿಗೆ ಮೊದಲ ಇಚ್ಛೆಯನ್ನು (Option), ನಂತರ ಎರಡನೇ ಇಚ್ಛೆಯನ್ನು, ಮೂರನೇ ಇಚ್ಛೆಯನ್ನು, ನಾಲ್ಕನೇ ಇಚ್ಛೆಯನ್ನು, ಐದನೇ ಇಚ್ಛೆಯನ್ನು, ಆರನೇ ಇಚ್ಛೆಯನ್ನು, ಹೀಗೆ ಇದೇ ಕ್ರಮದಲ್ಲಿ ಅವರು ತಮ್ಮ ಇಚ್ಛೆಗಳನ್ನು ನಮೂದಿಸುತ್ತಾ ಹೋಗಬಹುದು. ಇಚ್ಛೆ ನಮೂದಿಸುವುದಕ್ಕಾಗಿ ಇರುವ ನಮೂನೆಯಲ್ಲಿ ನೀವು ಆದ್ಯತಾ ಸಂಖ್ಯೆಗಳನ್ನು ನಮೂದಿಸುವುದರ ಅರ್ಥ, ನೀವು ನಿರ್ದಿಷ್ಟವಾಗಿ ಆ ಕಾಲೇಜಿಗೆ ಹಾಗೂ ಆ ಕೋರ್ಸಿಗೆ ಸೇರಲು ಆಸಕ್ತಿ ಹೊಂದಿರುತ್ತೀರಿ ಎಂದು ಆಗಿರುತ್ತದೆ.

VIII. ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಕೋರ್ಸನ್ನು/ ಕಾಲೇಜುಗಳನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ. ಆನಂತರ ಇಷ್ಟವಿರುವ ಇತರ ಕೋರ್ಸುಗಳು/ ಕಾಲೇಜುಗಳ ಇಚ್ಛೆಯನ್ನು ನಮೂದಿಸಿ. ಹೀಗೆ ಮೊದಲಿನ ಇಚ್ಛೆಗೆ ಶೇ. 100ರಷ್ಟು ಆದ್ಯತೆಯೆಂದು ಪರಿಗಣಿಸಿದರೆ, ನಂತರದ ಆದ್ಯತೆಗಳು ಇಳಿಕೆ/ಅವರೋಹಣ (descending) ಕ್ರಮದಲ್ಲಿ ಇರಬೇಕು. ಪ್ರತಿ ಸುತ್ತಿನ ಹಂಚಿಕೆ ನಂತರ, ಯಾವುದಾದರೂ ಹೊಸ ಕಾಲೇಜುಗಳು/ ಕೋರ್ಸುಗಳು ಸೇರ್ಪಡೆಯಾದರೆ ಈಗಾಗಲೇ ನೀವು ನಮೂದಿಸಿರುವ ಆದ್ಯತೆಗಳನ್ನು ಬದಲಾವಣೆ ಮಾಡಲು ಅಥವಾ ಹೊಸದಾಗಿ ಸೇರಿಸಲು ಅವಕಾಶವಿರುತ್ತದೆ.

IX. **ಇಚ್ಛೆ (Options) ಗಳನ್ನು ಎಷ್ಟು ಬೇಕಾದರೂ ನಮೂದಿಸಬಹುದು. ಅದಕ್ಕೆ ಯಾವುದೇ ಸಂಖ್ಯಾಮಿತಿ ಇರುವುದಿಲ್ಲ.** ಒಬ್ಬ ವಿದ್ಯಾರ್ಥಿ/ನಿಯು, ತನ್ನ ಸ್ವಂತ ಆದ್ಯತೆಗೆ ಅನುಗುಣವಾಗಿ ತಾನು ಬಯಸುವಷ್ಟು ಸಂಖ್ಯೆಯ ಇಚ್ಛೆಗಳನ್ನು ನಮೂದಿಸಬಹುದು. ಸೀಟು ಸಿಗದಿದ್ದ ಪಕ್ಷದಲ್ಲಿ ಉಂಟಾಗುವ ನಿರಾಸೆಯನ್ನು ತಪ್ಪಿಸುವ ದೃಷ್ಟಿಯಿಂದ, ವಿದ್ಯಾರ್ಥಿಗಳು ಇಚ್ಛೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಮೂದಿಸುವಂತೆ ಸಲಹೆ ನೀಡಲಾಗಿದೆ. ವಿದ್ಯಾರ್ಥಿ, ತನ್ನ ಇಚ್ಛೆಗಳನ್ನು ನಮೂದಿಸುವ ಸಮಯದಲ್ಲಿ ಪ್ರದರ್ಶಿಸಿರುವ ಸೀಟುಗಳ ಪೈಕಿ (ಲಭ್ಯವಿರುವ), ಅಂದರೆ ಕಾಲೇಜುವಾರು, ಪ್ರವರ್ಗವಾರು ಮತ್ತು ಕೋರ್ಸ್‌ವಾರು ಮತ್ತು ಡಿಸಿಪ್ಲಿನ್‌ವಾರು ಲಭ್ಯವಿರುವ ಸೀಟುಗಳಿಂದ ತನ್ನ ಇಚ್ಛೆಯ ಕೋರ್ಸ್/ ಕಾಲೇಜನ್ನು ನಮೂದಿಸಬಹುದು.

X. ಸೀಟಿನ ಹಂಚಿಕೆಗೆ ಸಂಬಂಧಿಸಿದಂತೆ ನೀವು ನೀಡಿರುವ ನಿಮ್ಮ ಇಚ್ಛೆಗಳ ಪೂರ್ಣ ಪಟ್ಟಿಯನ್ನು ಶೋಧಿಸುವುದು ಮುಗಿಯುವವರೆಗೆ, ನಿಮ್ಮ ನಂತರದ ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿ ನೀಡಿರುವ ಇಚ್ಛೆಗಳ ಪಟ್ಟಿಯನ್ನು ಹಂಚಿಕೆ ಪರಿಗಣನೆಗಾಗಿ ತೆಗೆದುಕೊಳ್ಳುವುದಿಲ್ಲ. ವಿದ್ಯಾರ್ಥಿ/ನಿ ಇಚ್ಛೆಗಳನ್ನು ನಮೂದಿಸುವುದಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ಕೊನೆಯ ದಿನಾಂಕ ಮತ್ತು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಅಭ್ಯರ್ಥಿಯು ತಾನು ಬಯಸಿದಷ್ಟು ಸಲ ತನ್ನ ಇಚ್ಛೆಗಳನ್ನು ಬದಲಾಯಿಸಬಹುದು. ಇಚ್ಛೆಗಳನ್ನು ನಮೂದಿಸಿದ ನಂತರ ವಿದ್ಯಾರ್ಥಿಗಳು, ಸಬ್‌ಮಿಟ್ (submit) ಬಟನ್ ಅನ್ನು ಒತ್ತಬೇಕು ಮತ್ತು ತಪ್ಪದೇ ಲಾಗ್‌ಔಟ್ ಆಗಬೇಕು.

XI. **ಪ್ರತಿಯೊಂದು ಸುತ್ತಿನಲ್ಲಿ ಗೊತ್ತುಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯದಂದು ಸರ್ವರ್‌ನಲ್ಲಿ ದಾಖಲಾಗಿರುವ ಇಚ್ಛೆಗಳು ಸ್ಥಿರವಾಗಿ ಉಳಿಯುತ್ತವೆ. ಹೀಗೆ ಸ್ಥಿರವಾಗಿ ಉಳಿದ ಇಚ್ಛೆಗಳನ್ನು ಮಾತ್ರ ಸೀಟು ಹಂಚಿಕೆಯ ಸಮಯದಲ್ಲಿ ಪರಿಗಣಿಸಲಾಗುವುದು. ಪ್ರತಿಯೊಂದು ಸುತ್ತಿನಲ್ಲಿ ಇಚ್ಛೆಗಳನ್ನು ನಮೂದಿಸುವುದಕ್ಕೆ ಗೊತ್ತುಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯ ಮುಗಿದ ನಂತರ ವಿದ್ಯಾರ್ಥಿಗಳು, ತಾವು ನಮೂದಿಸಿದ ಇಚ್ಛೆಗಳ ಮುದ್ರಿತ ಪ್ರತಿಯನ್ನು (ಪ್ರಿಂಟ್) ತೆಗೆದುಕೊಳ್ಳಲು ಸೂಚಿಸಲಾಗಿದೆ.**

### 4.5 "ಒಂದು ಬಾರಿ ಮಾತ್ರ ಇಚ್ಛೆ / ಅಯ್ಕೆಯನ್ನು" ದಾಖಲಿಸುವ ಬಗ್ಗೆ ಮುಖ್ಯ ಸೂಚನೆ.

ಅಭ್ಯರ್ಥಿಗಳು ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ಆದ್ಯತಾ ಕ್ರಮದಲ್ಲಿ ದಾಖಲಿಸುವ ಇಚ್ಛೆ / ಆಯ್ಕೆಗಳು, ಮುಂದಿನ 2ನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲ್ಪಡುತ್ತದೆ. ***ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ.*** ಅಭ್ಯರ್ಥಿಗಳು ಆಯ್ಕೆ (opt) ಮಾಡುವ **CHOICE** ಆಧಾರದ ಮೇಲೆ ಆದ್ಯತಾ ಕ್ರಮದಲ್ಲಿ ದಾಖಲಿಸಿರುವ ಇಚ್ಛೆ / ಆಯ್ಕೆಗಳನ್ನು option entry module ನಲ್ಲಿ ತೋರಿಸಲಾಗುವುದು. ಅಭ್ಯರ್ಥಿಗಳು ದಾಖಲಿಸಿದ ಇಚ್ಛೆ / ಆಯ್ಕೆಗಳನ್ನು ಮಾರ್ಪಡಿಸಬಹುದು ಅಥವಾ ತೆಗದು ಹಾಕಬಹುದು ಅಥವಾ ಕ್ರಮಾಂಕಗಳನ್ನು ಬದಲಾಯಿಸಬಹುದು. ಅಭ್ಯರ್ಥಿಯು ನಿರ್ದಿಷ್ಟ ಕಾಲೇಜು / ಕೋರ್ಸುಗಳಲ್ಲಿ ಪ್ರವೇಶ ಪಡೆಯಲು ಇಚ್ಛಿಸಿದ್ದರೆ / ಆಸಕ್ತಿ ಹೊಂದಿದ್ದರೆ, ಅಂತಹ Options ಗಳು ಆದ್ಯತೆಯ ಕ್ರಮದಲ್ಲಿ Option ಲಿಸ್ಟ್‌ನಲ್ಲಿ ಲಭ್ಯವಿದೆಯೇ ಎಂದು ಖಚಿತಪಡಿಸಿಕೊಳ್ಳಿ, ಸೀಟು ಹಂಚಿಕೆಯ ಸಮಯದಲ್ಲಿ ಉದ್ಭವಿಸಬಹುದಾದ ಸೀಟುಗಳನ್ನು ಆಯಾ ಸುತ್ತಿನ ಸೀಟು ಹಂಚಿಕೆಯ ಸುತ್ತಿನಲ್ಲಿ ಹಂಚಿಕೆಗೆ ಪರಿಗಣಿಸುವುದರಿಂದ, ಸೀಟ್ ಮ್ಯಾಟ್ರಿಕ್ಸ್ ಅನ್ನು ನೋಡದಯೆ? ಅಂತಹ ಎಲ್ಲಾ Options ಗಳನ್ನು ನಮೂದಿಸಲು / ಉಳಿಸಿಕೊಳ್ಳಲು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

ಮಾಹಿತಿ ಪುಸ್ತಕದಲ್ಲಿ ನೀಡಿರುವ ಕಾಲೇಜುಗಳ ಕ್ರಮ ಸಂಖ್ಯೆಯ ಪಟ್ಟಿಯನ್ನು ಕೇವಲ ನಿಮ್ಮ ಮಾಹಿತಿಗಾಗಿ ನೀಡಲಾಗಿದೆಯೇ ಹೊರತು, ಅದನ್ನೇ ನಿಮ್ಮ ಆದ್ಯತಾ ಕ್ರಮವಾಗಿ ನಮೂದಿಸಬಾರದು.

## 4.6 ಅಣುಕು ಸೀಟು ಹಂಚಿಕೆ

- ಅರ್ಹ ಅಭ್ಯರ್ಥಿಗಳು ದಾಖಲಿಸಿರುವ ಇಚ್ಛೆ / ಆಯ್ಕೆಗಳನ್ನು ದಾಖಲಿಸಿ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಆಧಾರದ ಮೇಲೆ ಅಣುಕು ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.
- ಅಭ್ಯರ್ಥಿಗಳು ಅಣಕು ಫಲಿತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ.
- ಮೊದಲನೇ ಸುತ್ತಿಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಯೂ ಸಹ ಇಷ್ಟವಿದ್ದಲ್ಲಿ ಇಚ್ಛೆ / ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ಅಣುಕು ಸೀಟು ಹಂಚಿಕೆಯ ಫಲಿತಾಂಶದ ನಂತರವೂ ದಾಖಲಿಸಬಹುದಾಗಿರುತ್ತದೆ.
- ಅಭ್ಯರ್ಥಿಗಳು ಅಂತಿಮವಾಗಿ ಸಲ್ಲಿಸುವ ಇಚ್ಛೆ / ಆಯ್ಕೆಗಳ (options) ಪಟ್ಟಿಯ ಪ್ರಿಂಟ್ ಅನ್ನು ತೆಗೆದು ಇಟ್ಟುಕೊಳ್ಳಬೇಕು.
- ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆಯು, ಕೇವಲ ಒಂದು ಸಾಂಕೇತಿಕ ಸ್ವರೂಪದ ಸೀಟು ಹಂಚಿಕೆ ಪ್ರಕ್ರಿಯೆ ಮಾತ್ರವಾಗಿರುತ್ತದೆ. ಅಣಕು ಸೀಟು ಹಂಚಿಕೆಯ ನಂತರ, ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು ಬದಲಾಯಿಸುವ ಕಾರಣದಿಂದಲೇ, ಅಣಕು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಹಂಚಿಕೆಯಾದ ಸೀಟು, ವಾಸ್ತವಿಕ ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಸಿಗಬಹುದು ಅಥವಾ ಸಿಗದಿರಬಹುದು. ಆದರೆ, ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆಯು, ವಿದ್ಯಾರ್ಥಿಗಳು ಈಗಾಗಲೇ ನಮೂದಿಸಿರುವ ತಮ್ಮ ಇಚ್ಛೆಗಳನ್ನು (final options) ಪರಿಷ್ಕರಿಸಲು, ಅಪ್‌ಡೇಟ್ ಮಾಡಲು, ಸೇರಿಸಲು ಅಥವಾ ಕೈಬಿಡಲು ಸಹಾಯ ಮಾಡುತ್ತದೆ.
- ಅಣಕು ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ಬದಲಾಯಿಸುವ / ಮಾರ್ಪಡಿಸಿ ಅಂತಿಮವಾಗಿ ದಾಖಲಿಸುವ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ಪ್ರಕಟಿಸಲಾಗುವುದು.
- ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳಿಗೆ ಹಂಚಿಕೆಯಾದ ಸೀಟುಗಳ ಬಗ್ಗೆ ನಿರ್ಧರಿಸಲು ನಾಲ್ಕು CHOICE ಗಳನ್ನು ನೀಡಲಾಗುವುದು. ಅಭ್ಯರ್ಥಿಗಳು ಪೋಷಕರೊಡನೆ ಚರ್ಚಿಸಿ, ಸೂಕ್ತ ನಿರ್ಧಾರ ತೆಗೆದು ಕೊಂಡು ಮುಂದಿನ ಕ್ರಮ ವಹಿಸಬಹುದಾಗಿದೆ.
- ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಬಹುದಾಗಿದೆ.

## 4.7 ನಾವು ಅಣಕು ಹಂಚಿಕೆಯನ್ನು ಏಕೆ ಮಾಡಬೇಕು?

✓ ಅಣಕು ಸೀಟು ಹಂಚಿಕೆಯ ಆಧಾರದ ಮೇಲೆ, ಒಬ್ಬ ವಿದ್ಯಾರ್ಥಿ/ನಿಯು ತಾನು ನೀಡಿರುವ ಇಚ್ಛೆಗಳ ಆದ್ಯತೆಗೆ ಅನುಸಾರವಾಗಿ, ಕಾಲೇಜು/ ಕೋರ್ಸ್/ ಸ್ಟ್ರೀಮ್‌ನ ಸಾಂಕೇತಿಕ ಹಂಚಿಕೆಯನ್ನು ಪಡೆಯುತ್ತಾನೆ/ಳೆ. ಇದರಿಂದ, ಆ ವಿದ್ಯಾರ್ಥಿ/ನಿಗೆ ತಾನು ಈಗಾಗಲೇ ನಮೂದಿಸಿರುವ ಇಚ್ಛೆಗಳನ್ನು ಬದಲಾಯಸಿಕೊಳ್ಳುವುದಕ್ಕೆ ಅಥವಾ ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಒಂದು ಸ್ಪಷ್ಟವಾದ ಚಿತ್ರಣ ಸಿಗುತ್ತದೆ. ಹಾಗೆಯೇ, ಒಬ್ಬ ವಿದ್ಯಾರ್ಥಿ/ನಿ, ತಾನು

ಅರ್ಹನಾ/ಳಾಗಿರುವ ಯಾವುದೇ ಸೀಟಿಗೆ, ಇಚ್ಛೆ ನಮೂದಿಸದೆ ಇರುವ ಕಾರಣದಿಂದ, ಆ ಸೀಟು ಹೇಗೆ ಅವನಿಗಿಂತ/ ಅವಳಿಗಿಂತ ಕಡಿಮೆ ರ್‍ಯಾಂಕ್ ಪಡೆದಿರುವ ಬೇರೊಬ್ಬ ವಿದ್ಯಾರ್ಥಿ/ನಿಗೆ ಹಂಚಿಕೆಯಾಗುತ್ತದೆ ಎನ್ನುವ ವಿಷಯವನ್ನು ಸಹ ತಿಳಿದುಕೊಳ್ಳಬಹುದು. ಆದ್ದರಿಂದ, ಇಚ್ಛೆಗಳ ಆದ್ಯತೆಯನ್ನು ಬದಲಾಯಿಸುವುದಕ್ಕೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ಸೇರಿಸುವುದಕ್ಕೆ ಅಥವಾ ಇಚ್ಛೆಗಳನ್ನು ಹೊಸ ಆದ್ಯತಾ ಕ್ರಮದಲ್ಲಿ ನಮೂದಿಸುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಮತ್ತೊಂದು ಅವಕಾಶ ನೀಡಲಾಗುವುದು.

- ✓ ಅಭ್ಯರ್ಥಿಗಳು ಅಣಕು ಫಲಿಂತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ/ ಆಯ್ಕೆಗಳನ್ನು ಬದಲಾಯಿಸುವುದರಿಂದ ಅಥವಾ ಹೊಸದಾಗ ಸೇರಿಸಬಹುದಾಗಿರುವುದರಿಂದ ಅಥವಾ ಅಳಿಸಬಹುದಾಗಿರುವ ಕಾರಣದಿಂದ, ಅಣುಕು ಸೀಟು ಹಂಚಿಕೆಯಲ್ಲಿ ಹಂಚಿಕೆಯಾದ ಸೀಟೇ ನೈಜ ಸೀಟು ಹಂಚಿಕೆಯಲ್ಲಿ ಸಿಗಬಹುದು ಅಥವಾ ಸಿಗದೇ ಇರಬಹುದು.
- ✓ ಇಚ್ಛೆ/ ಆಯ್ಕೆಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಗಳೂ ಸಹ ಇಷ್ಟವಿದ್ದಲ್ಲಿ ರೂ.750/– ಅನ್ನು ಪಾವತಿಸಿ, ಇಚ್ಛೆ/ ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ಅಣಕು ಸೀಟು ಹಂಚಿಕೆಯ ಫಲಿತಾಂಶದ ನಂತರವೂ ದಾಖಲಿಸಬಹುದಾಗಿರುತ್ತದೆ.
- ✓ ಅಭ್ಯರ್ಥಿಗಳು ಅಂತಿಮವಾಗಿ ಸಲ್ಲಿಸುವ ಇಚ್ಛೆ/ ಆಯ್ಕೆಗಳ (options) ಪಟ್ಟಿಯ ಪ್ರಿಂಟ್ ಅನ್ನು ತೆಗೆದು ಇಟ್ಟುಕೊಳ್ಳಬೇಕು.

## 5. ಆನ್‌ಲೈನ್ ಮೂಲಕ 2 ಸುತ್ತುಗಳಲ್ಲಿ ಸೀಟು ಹಂಚಿಕೆ ಮಾಡುವ ವಿಧಾನ

**ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ: ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026 ಬೆಂಗಳೂರು ದಿನಾಂಕ 27–04–2026ರ ಅನ್ವಯ, ಜಾತಿ ಪ್ರಮಾಣ ಪತ್ರದಲ್ಲಿ ಒಳಮೀಸಲಾತಿಯ ವಿವರ ಮುದ್ರಿಸಿರುವ ಆರ್‌ಡಿ ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಮಾತ್ರ ಲಭಿಸುತ್ತದೆ.**

ಸರ್ಕಾರಿ ಸೀಟುಗಳಿಗೆ ಪ್ರವೇಶವನ್ನು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ ನಿಯಮಗಳು, 2006 (ಸಂಕ್ಷಿಪ್ತವಾಗಿ CET-2006 ಪ್ರವೇಶ ನಿಯಮಗಳು) ಗೆ ಅನುಗುಣವಾಗಿ ಮಾಡಲಾಗುವುದು ಮತ್ತು ಆದ್ದರಿಂದ ಈ ಮಾಹಿತಿ ಬುಲೆಟಿನ್‌ನಲ್ಲಿರುವ ವಿವರಗಳು ಮತ್ತು ಸೂಚನೆಗಳು ಸದರಿ ನಿಯಮಗಳು ಮತ್ತು ಸರ್ಕಾರಿ ಆದೇಶಗಳಿಗೆ ಒಳಪಟ್ಟಿರುತ್ತವೆ. ಯಾವುದೇ ವ್ಯತ್ಯಾಸವಿದ್ದಲ್ಲಿ, ನಿಯಮಗಳು ಮಾನ್ಯವಾಗಿರುತ್ತವೆ.

ಸರ್ಕಾರ ಹೊರಡಿಸಿದ ಸೀಟ್ ಮ್ಯಾಟ್ರಿಕ್ಸ್ ಪ್ರಕಾರ, ಈ ಕೋರ್ಸ್‌ಗಳಿಗೆ ಸೀಟು ಹಂಚಿಕೆಯನ್ನು ಅರ್ಹತೆ / ಮೆರಿಟ್ ಆಧಾರದ ಮೇಲೆ ಮತ್ತು ಕೆಇಎ ವೆಬ್-ಪೋರ್ಟಲ್ ಮೂಲಕ ಅಭ್ಯರ್ಥಿಗಳು ನಮೂದಿಸಿದ ಆಯ್ಕೆಗಳ ಆಧಾರದ ಮೇಲೆ ಆನ್‌ಲೈನ್‌ನಲ್ಲಿ ಮಾಡಲಾಗುತ್ತದೆ.

ಇಚ್ಛೆ/ ಆಯ್ಕೆಗಳನ್ನು ನಮೂದಿಸುವ ಕುರಿತು ಹಾಗೂ ಅಣುಕು ಸೀಟು ಹಂಚಿಕೆಯ ಬಗ್ಗೆ ವಿವರವಾದ ಮಾಹಿತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಹಿಂದಿನ ಪುಟಗಳಲ್ಲಿ ವಿವರಿಸಲಾಗಿದೆ. ಅದರ ಮುಂದುವರಿದ ಭಾಗವಾಗಿ, ಆನ್‌ಲೈನ್ ಮೂಲಕ 2 ಸುತ್ತುಗಳಲ್ಲಿ ಸೀಟುಗಳ ಹಂಚಿಕೆ ಕುರಿತು ವಿವರವಾದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ. ಅಂದರೆ,

1. ಮೊದಲನೇ ಸುತ್ತು
2. **ಎರಡನೇ ಹಾಗೂ ಕೊನೆಯ ಸುತ್ತು**

ವಿವಿಧ ವೃತ್ತಿಪರ ಕೋರ್ಸುಗಳಿಗೆ ಪ್ರತಿ ಸುತ್ತಿನ ಸೀಟು ಹಂಚಿಕೆಯ ನಿಯಮಗಳು, ಸೂಚನೆಗಳು, ಮಾರ್ಗದರ್ಶನಗಳು, ವಿಧಾನಗಳು, ವೇಳಾಪಟ್ಟಿ ಮುಂತಾದ ಅಗತ್ಯ ಮಾಹಿತಿಗಳನ್ನು ಕಾಲಕಾಲಕ್ಕೆ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರ ಅನ್ವಯ ಪಾಲಿಸಬೇಕು.

### 5.1 ಮೊದಲನೇ ಸುತ್ತು

**ವಿವಿಧ** ಕೋರ್ಸುಗಳ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ದಾಖಲಿಸಿರುವ (Options) ಇಚ್ಛೆ / ಆಯ್ಕೆಗಳನ್ನು ಪರಿಗಣಿಸಿ, ಸರ್ಕಾರವು ನೀಡಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಪರಿಗಣಿಸಿ, ಅಭ್ಯರ್ಥಿಯ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಅನುಸಾರ ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯನ್ನು ಮಾಡಿ ಅಂತಿಮ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.

### 5.2 ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರದ ಸೂಚನೆಗಳು

ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ, ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ವಿವಿಧ ನಾಲ್ಕು **CHOICE** ಗಳನ್ನು ನೀಡಲಾಗುವುದು. ಅಭ್ಯರ್ಥಿಗಳು ನಾಲ್ಕು **CHOICE** ಗಳಲ್ಲಿ ತಮಗೆ ಸರಿ ಎನಿಸುವ ಯಾವುದಾದರೂ ಒಂದು **CHOICE** ಅನ್ನು ಆಯ್ಕೆ ಮಾಡುವ ಮೊದಲು, ಪ್ರತಿ **CHOICE** ಗಳ ವಿವರಣೆಯನ್ನು ಓದಿ ಸರಿಯಾಗಿ ಅರ್ಥೈಸಿಕೊಂಡು, ತಮ್ಮ ಪೋಷಕರೊಡನೆ ತೀರ್ಮಾನಿಸಿ ಅಭ್ಯರ್ಥಿಯು ತನಗೆ ಸೂಕ್ತವೆನಿಸಿದ **CHOICE** ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ. ನಾಲ್ಕು **CHOICE** ಗಳಲ್ಲಿ ಯಾವುದೇ **CHOICE** ಅನ್ನು ಆಯ್ಕೆ ಮಾಡದಿರುವ ಅಭ್ಯರ್ಥಿಗಳು ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

ಅಭ್ಯರ್ಥಿಗಳು **CHOICE** ಗಳನ್ನು ಆಯ್ಕೆ ಮಾಡಿಕೊಳ್ಳಲು, ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು, ಬ್ಯಾಂಕಿನಲ್ಲಿ ಶುಲ್ಕ ಪಾವತಿ ಮಾಡಲು, ಕನ್‌ಫರ್ಮೇಶನ್ ಸ್ಲಿಪ್ ಡೌನ್‌ಲೋಡ್ ಮಾಡಲು ಮತ್ತು ಪ್ರವೇಶ ಆದೇಶ

ಪತ್ರವನ್ನು ಕಾಲೇಜಿನ ವತಿಯಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾಧಿಕಾರಕ್ಕೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ. ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ugcet2026 ಗೆ ಭೇಟಿ ನೀಡಲು ಕೋರಿದೆ.

ಮೊದಲನೇ ಸುತ್ತಿನಲ್ಲಿ **OPTIONS** ಗಳನ್ನು ನೀಡಿ, ಆದರೆ ಯಾವುದೇ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳಿಗೆ ಯಾವುದೇ **CHOICE** ಅನ್ನು ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ. ಅಂತಹ ಅಭ್ಯರ್ಥಿಗಳು ಈಗಾಗಲೇ ದಾಖಲಿಸಿರುವ ಇಚ್ಛೆ / ಆಯ್ಕೆಗಳೊಂದಿಗೆ ಮುಂದಿನ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

- ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ಸೂಕ್ತವಾದ **CHOICE** ಅನ್ನು ಆಯ್ಕೆ ಮಾಡುವುದರಿಂದ ಮುಂದಿನ ಸುತ್ತಿನಲ್ಲಿ ಭಾಗವಹಿಸಬಹುದು.
- ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ ಅಭ್ಯರ್ಥಿಗಳು, **CHOICE**-1 ಅನ್ನು ಆಯ್ಕೆ ಮಾಡಿದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಹಂಚಿಕೆಗೆ ಪರಿಗಣಿಸುವುದಿಲ್ಲ.
- ಒಂದು ವೇಳೆ ಅಭ್ಯರ್ಥಿಗಳು ತನಗೆ ಹಂಚಿಕೆಯಾದ ಸೀಟು ತೃಪ್ತಿಕರವಾಗಿದ್ದು, ಯಾವುದೇ ಬದಲಾವಣೆ ಬೇಡ ಎಂದೆನಿಸಿದಲ್ಲಿ ಮಾತ್ರ **CHOICE**-1 ಅನ್ನು ಆಯ್ಕೆ ಮಾಡಬಹುದು. ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು **CHOICE**-1 ಅನ್ನು ಆಯ್ಕೆ ಮಾಡಲು ಸೂಚಿಸಿದೆ.

## 5.3 ಹಂಚಿಕೆಯಾದ ಕಾಲೇಜಿನಲ್ಲಿ ಪ್ರವೇಶ ಪಡೆಯುವುದು ಹೇಗೆ?

- ಶುಲ್ಕ ಪಾವತಿಯ ನಂತರ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಲಾಗಿನ್ ಮಾಡಿ ಕನ್ ಫರ್ಮೇಶನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು.
- ಕನ್‌ಫರ್ಮೇಶನ್ ಸ್ಲಿಪ್ ನಲ್ಲಿ ಹಂಚಿಕೆಯಾದ ಕಾಲೇಜಿನ ವಿವರ, ಪ್ರವೇಶ ಪಡೆಯಲು ಕೊನೆಯ ದಿನಾಂಕ ಇತ್ಯಾದಿಗಳನ್ನು ಮುದ್ರಿಸಲಾಗಿರುತ್ತದೆ.
- ಕೊನೆಯ ದಿನಾಂಕದ ಒಳಗೆ ಕಾಲೇಜಿಗೆ ಎಲ್ಲಾ ಮೂಲ ದಾಖಲೆಗಳು, ಎರಡು ಸೆಟ್ ಜೆರಾಕ್ಸ ಪ್ರತಿಗಳನ್ನು ಹಾಗೂ ಒಟಿಪಿ ಪಡೆಯಲು ಮೊಬೈಲ್ ಸೆಟ್ ಅನ್ನು ತೆಗೆದುಕೊಂಡು ಹೋಗಬೇಕು
- ಕಾಲೇಜಿನವರು ಅವರ ಅಧಿಕೃತ ಲಾಗಿನ್ ನಲ್ಲಿ ಅಭ್ಯರ್ಥಿಯ ವಿವರಗಳನ್ನು ಪಡೆದು, ಫೋಟೋ ಪರಿಶೀಲಿಸಿ (online face recognition) ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ವಾಟ್ಸಾಪ್ ಮೂಲಕ ಒಟಿಪಿ ಕಳುಹಿಸುತ್ತಾರೆ.
- ಒಟಿಪಿ ಪರಿಶೀಲನೆ / ಧೃಡೀಕರಣ ದ ನಂತರ ತಾತ್ಕಾಲಿಕ ಪ್ರವೇಶ ಆದೇಶ (provisional admission order) ವನ್ನು ಡೌನ್ ಲೋಡ್ ಮಾಡಿ ಒಂದು ಪ್ರತಿಯನ್ನು ಅಭ್ಯರ್ಥಿಗೆ ನೀಡುತ್ತಾರೆ ಇನ್ನೊಂದು ಪ್ರತಿಯನ್ನು ಕಾಲೇಜಿನವರು ತಮ್ಮ ಬಳಿ ಇಟ್ಟು ಕೊಳ್ಳುತ್ತಾರೆ – (ಅಭ್ಯರ್ಥಿಯ ಸಹಿಯನ್ನು ಎರಡೂ ಪ್ರತಿಗಳ ಮೇಲೆ ಪಡೆಯುವ ಮೂಲಕ)

## ಮೊದಲನೇ ಸುತ್ತಿನಲ್ಲಿನ CHOICE ಗಳ ವಿವರಣೆ

**CHOICE-1** – ನನಗೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಸಂಪೂರ್ಣವಾಗಿ ಇಷ್ಟವಾಗಿದ್ದು ನಾನು ಕಾಲೇಜಿಗೆ ಸೇರುತ್ತೇನೆ, ನನಗೆ ಯಾವುದೇ ಬದಲಾವಣೆ ಅವಶ್ಯಕತೆ ಇರುವುದಿಲ್ಲ. ಮುಂದಿನ ಸುತ್ತುಗಳಲ್ಲಿ ಭಾಗವಹಿಸಲೂ ಸಹ ನನಗೆ ಇಷ್ಟವಿರುವುದಿಲ್ಲ, ಆದ್ದರಿಂದ ನನ್ನನ್ನು ಮುಂದಿನ ಯಾವುದೇ ಸುತ್ತುಗಳಲ್ಲಿ ಸೀಟು ಹಂಚಿಕೆಗೆ ಪರಿಗಣಿಸಬಾರದು. ನಾನು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ, Seat Confirmation Slip ಅನ್ನು ಡೌನ್‌ಲೋಡ್ ಮಾಡಿಕೊಂಡು ನಂತರ ಕಾಲೇಜಿನ ಪೋರ್ಟಲ್ ಲಾಗಿನ್ ಮೂಲಕ ಓಟಿಪಿ ಪಡೆದು, ಫೋಟೋ Recognition ಮಾಡಿ ಪ್ರವೇಶಪತ್ರ ಡೌನ್‌ಲೋಡ್ ಮಾಡಿ, ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯುತ್ತೇನೆ ಎಂದು ಧೃಡೀಕರಿಸುತ್ತೇನೆ.

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ **CHOICE**-1 ಅನ್ನು ಆಯ್ಕೆ ಮಾಡಿಕೊಂಡು ಮುಂದಿನ ಕ್ರಮವಹಿಸಬಹುದು.

**ಮುಖ್ಯವಾದುದು:** CHOICE-1 ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

**CHOICE-1 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- ✓ ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದ್ದಲ್ಲಿ, **CHOICE**-1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.
- ✓ ನಂತರ ಅದೇ ವೆಬ್‌ಸೈಟ್‌ನಿಂದಲೇ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಳ್ಳಬೇಕು.
- ✓ ಚಲನ್ ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಆಯ್ಕೆಯಾಗಿರುವ ಕಾಲೇಜು ಮತ್ತು ಕೋರ್ಸಿನ ವಿವರ, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗುವುದು. ಅಭ್ಯರ್ಥಿಯು ಸರಿಯಾಗಿದೆ ಎಂದು ಪರಿಶೀಲಿಸಿ ಸಹಿ ಮಾಡಬೇಕು. ನಂತರ ನಿಗದಿತ ಶುಲ್ಕವನ್ನು ಪಾವತಿಸಬೇಕು.
- ✓ ನಂತರ Confirmation Slip ಅನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗಾಗಿ ಪ್ರವೇಶಾತಿ ಪಡೆಯಲು ಅಭ್ಯರ್ಥಿಗಳು ಖುದ್ದಾಗಿ ಎಲ್ಲಾ ಮೂಲ ದಾಖಲೆಗಳೊಂದಿಗೆ ಆಯಾ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು.
- ✓ ಕಾಲೇಜಿನವರು ಅವರ ಅಧಿಕೃತ ಲಾಗಿನ್‌ನಲ್ಲಿ (College Portal) ಅಭ್ಯರ್ಥಿಯ ವಿವರಗಳನ್ನು ಪಡೆದು, ಫೋಟೋ (Online Face Recognition) ಪರಿಶೀಲಿಸಿ, ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ವಾಟ್ಸಾಪ್ ಮೂಲಕ ಓಟಿಪಿ ಕಳುಹಿಸಲಾಗುತ್ತದೆ.
- ✓ ಓಟಿಪಿ ವೆರಿಫಿಕೇಶನ್ ಮಾಡಿದ ನಂತರ Admission Order ಅನ್ನು ಕಾಲೇಜಿನವರು ಅವರ ಪೋರ್ಟಲ್‌ನಲ್ಲಿಯೇ ಡೌನ್‌ಲೋಡ್ ಮಾಡುತ್ತಾರೆ. (ಅಭ್ಯರ್ಥಿಗಳು Admission Order ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ)
- ✓ ನಂತರ ಪ್ರವೇಶ ಪತ್ರದಲ್ಲಿ ನಿಗದಿ ಪಡಿಸಿದ ಜಾಗದಲ್ಲಿ ಅಭ್ಯರ್ಥಿಯು ಸಹಿಯನ್ನು ಮಾಡಬೇಕು ಹಾಗು ಡಿಸಿಇಟಿ–2026ರ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಬೇಕು.
- ✓ ಈ ಹಂತಗಳ ನಂತರ ಅಭ್ಯರ್ಥಿಯ ಪ್ರವೇಶಾತಿ ಪ್ರಕ್ರಿಯೆ ಪೂರ್ಣವಾಗುತ್ತದೆ ಮತ್ತು ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.

**CHOICE-1 ಅಭ್ಯರ್ಥಿಗಳು ಪಾಲಿಸಬೇಕಾದ** ಹಂತಗಳು – ನಿಯಮಗಳು

ಮೊದಲನೇ ಹಂತ – ಶುಲ್ಕ ಪಾವತಿ

ಎರಡನೇ ಹಂತ – Confirmation Slip ಅನ್ನು ಡೌನ್‌ಲೋಡ್ ಮಾಡುವುದು

ಮೂರನೇ ಹಂತ – ಖುದ್ದಾಗಿ ಕಾಲೇಜಿಗೆ ಪ್ರವೇಶಾತಿ ಪಡೆಯಲು ವರದಿ ಮಾಡಿಕೊಳ್ಳುವುದು (ಎಲ್ಲಾ ಮೂಲ ದಾಖಲೆಗಳು ಮತ್ತು ಮೊಬೈಲ್ ನೊಂದಿಗೆ)

ನಾಲ್ಕನೇ ಹಂತ – Online ಫೋಟೋ (Face Recognition) ಪರಿಶೀಲನೆ – ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ವಾಟ್ಸಾಪ್ ಮೂಲಕ ಓಟಿಪಿ ಪರಿಶೀಲನೆ

ಐದನೇ ಹಂತ – ಓಟಿಪಿ ವೆರಿಫಿಕೇಶನ್ ಮಾಡಿದ ನಂತರ Admission Order ಅನ್ನು ಕಾಲೇಜಿನವರು ಅವರ ಪೋರ್ಟಲ್ ನಲ್ಲಿಯೇ ಡೌನ್‌ಲೋಡ್ ಮಾಡುವುದು.

ಪ್ರವೇಶಾತಿ ಮುಕ್ತಾಯ

**CHOICE-2** – ನನಗೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಇಷ್ಟವಾಗಿರುತ್ತದೆ, ಆದರೆ ನಾನು ಇನ್ನೂ ಉತ್ತಮವಾದ ಸೀಟನ್ನು ಪಡೆಯಲು ಮುಂದಿನ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ. ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರಾಧಿಕಾರದ ವೆಬ್‌ಸೈಟಿನಿಂದ **ಚಲನ್ ಡೌನ್‌ಲೋಡ್ ಮಾಡಿ ಶುಲ್ಕವನ್ನು ಪಾವತಿಸುತ್ತೇನೆ.** ಎರಡನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಪಡೆಯಲು ನಿಗದಿತ ಶುಲ್ಕವನ್ನು ಪಾವತಿಸಬೇಕು ಎಂದು ನನಗೆ ತಿಳಿದಿದೆ.

CHOICE-2 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸಿರುತ್ತಾರೆ ಎಂದರೆ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು ಅಂದರೆ ಹಂಚಿಕೆಯಾದ ಸೀಟಿನ ಮೇಲ್ಪಟ್ಟ ಇಚ್ಛೆ / ಆಯ್ಕೆಗಳು (Higher order Options means, options entered above the allotted option) ದೊರಕದಿದ್ದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟೇ ಉಳಿಯುತ್ತದೆ. ಒಂದುವೇಳೆ ಎರಡನೇ ಸುತ್ತಿನಲ್ಲಿ ಮೆರಿಟ್ ಹಾಗು ಅಭ್ಯರ್ಥಿಗಳು ಮೇಲ್ಪಟ್ಟ ಇಚ್ಛೆ / ಆಯ್ಕೆಗಳಲ್ಲಿ ಆದ್ಯತಾ ಕ್ರಮದಲ್ಲಿ ಉಳಿಸಿಕೊಳ್ಳುವ ಸೀಟು ದೊರೆತಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ತಂತಾನೆ ರದ್ದುಗೊಂಡು ಸೀಟ್ ಮ್ಯಾಟ್ರಿಕ್ಸ್ ಪೂಲ್‌ಗೆ ಸೇರ್ಪಡೆಯಾಗಿ ನಂತರದ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. ಎರಡನೇ ಸುತ್ತಿನಲ್ಲಿ ಹೊಸದಾಗಿ ಹಂಚಿಕೆಯಾಗುವ ಸೀಟನ್ನೇ ಕಡ್ಡಾಯವಾಗಿ ಪಡೆಯಬೇಕು.

ಕ್ರಮ: ಮುಂದಿನ ಎರಡನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ higher order options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾದಲ್ಲಿ, ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಬೇಕು. ಒಂದುವೇಳೆ ಮುಂದಿನ ಎರಡನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ higher order options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ, ಈಗಾಗಲೇ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಲು ಇಚ್ಛಿಸುತ್ತೇನೆ ಎಂದು ದೃಢೀಕರಿಸುತ್ತೇನೆ. ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ನಿರ್ಧರಿಸುವುದಾಗಿದ್ದರೆ / ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ **CHOICE 2** ಅನ್ನು ಆಯ್ಕೆ ಮಾಡಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸಬಹುದು.

**ಮುಖ್ಯವಾದುದು:** ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ತಮ್ಮ ಬಳಿ ಇಟ್ಟುಕೊಂಡು (Hold ಮಾಡಿ) ಎರಡನೇ ಸುತ್ತಿನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ higher order options ಗಳಿಗೆ ಮಾತ್ರ ಸೀಟು ಆಯ್ಕೆಗೆ ಪರಿಗಣಿಸಲಾಗುವುದು.

**ಗಮನಿಸಿ:** ಅಭ್ಯರ್ಥಿ ತಮ್ಮ ರ‍್ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ. ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ಸೇರಿಸಲು ಅವಕಾಶವಿರುವುದಿಲ್ಲ. ಒಂದುವೇಳೆ **ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ ಕಾಲೇಜು ಅಥವಾ ಕೋರ್ಸುಗಳು ಸೇರ್ಪಡೆಯಾದಲ್ಲಿ ಮಾತ್ರ** options ಗಳನ್ನು ಸೇರಿಸಲು ಅವಕಾಶವಿರುತ್ತದೆ.

**CHOICE-2 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ higher order options ಗಳನ್ನು ಮಾತ್ರ ತೋರಿಸಲಾಗುವುದು, ಅಭ್ಯರ್ಥಿಗಳು higher order options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು.
- **CHOICE**-2 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಅಂದರೆ Higher Order Options ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ. ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.
- Higher Order Options ಅಂದರೆ, ಒಬ್ಬ ಅಭ್ಯರ್ಥಿಯು 180 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ, ಇವುಗಳ ಪೈಕಿ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗೆ 123 ನೇ ಕ್ರಮಾಂಕದ ಆಪ್ಷನ್ ನ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ, 1 ರಿಂದ 122 ನೇ ಆಪ್ಷನ್‌ಗಳ ಸೀಟುಗಳು Higher Order Options ಆಗುತ್ತದೆ. ಎರಡನೇ ಸುತ್ತಿನಲ್ಲಿ ಈ ಮೇಲಿನ ಯಾವುದೇ ಆಪ್ಷನ್‌ಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ.
- Higher Order Options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.

**CHOICE-3:** ಅಭ್ಯರ್ಥಿಯು ತನಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ, ನಾನು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ರದ್ದುಪಡಿಸಿಕೊಂಡು ಮುಂದಿನ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ಧೃಡೀಕರಿಸುತ್ತೇನೆ.

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸಲು ನಿರ್ಣಯಿಸಿದರೆ CHOICE-3 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

CHOICE-3 ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ options ಗಳನ್ನು ತೋರಿಸಲಾಗುವುದು (ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿ ಅಭ್ಯರ್ಥಿಯು ರದ್ದುಪಡಿಸಿಕೊಂಡ option ಅನ್ನು ಹೊರತುಪಡಿಸಿ ಉಳಿದ ಎಲ್ಲಾ ಇಚ್ಛೆ / ಆಯ್ಕೆಗಳು), ಅಭ್ಯರ್ಥಿಗಳು options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ. ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ಸೇರಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ **ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ ಕಾಲೇಜು ಅಥವಾ ಕೋರ್ಸುಗಳು ಸೇರ್ಪಡೆಯಾದಲ್ಲಿ ಮಾತ್ರ** options ಗಳನ್ನು ಸೇರಿಸಲು ಅವಕಾಶವಿರುತ್ತದೆ.

**CHOICE-3 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- **CHOICE**-3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ. **CHOICE**-3 ಅಭ್ಯರ್ಥಿಗಳಿಗೆ ಮೊದಲ ಸುತ್ತಿನಲ್ಲಿ ಆಯ್ಕೆಯಾದ ಸೀಟು ಇಷ್ಟವಿರುವುದಿಲ್ಲ.
- **CHOICE**-3 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು.

**CHOICE-4:** ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟು ತೃಪ್ತಿಕರವಾಗಿಲ್ಲ, ನನಗೆ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ,

**ಕ್ರಮ: ಅಭ್ಯರ್ಥಿಗಳು** ಈ ಮೇಲಿನಂತೆ ನಿರ್ಣಯಿಸಿದಲ್ಲಿ, **CHOICE**-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬಹುದು.

***ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಮಾಹಿತಿ***

ಈಗಾಗಲೇ **OPTIONS** ಗಳನ್ನು ನಮೂದಿಸಿ ಆದರೆ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು **CHOICE** ಗಳನ್ನು ನೀಡುವ ಅವಶ್ಯಕತೆ ಇರುವುದಿಲ್ಲ. ಮುಂದಿನ ಸುತ್ತಿನ ಸೀಟು ಹಂಚಿಕೆಗೆ ಭಾಗವಹಿಸಬಹುದು

## FIRST ROUND CHOICES

**Choice-1**: Satisfied with the allotted seat and candidate is willing to report to the allotted college, therefore, candidate will not be considered for further allotment of seats in any subsequent round for any discipline. Such candidates should pay the prescribed fees by downloading the Challan, obtain the Confirmation Slip and report to the college. College authorities with their login will download the admission order through face recognition and OTP verification.

Further any candidate who has paid the fees and obtained the confirmation slip and fails to report to the College on or before the last date, for such candidates no extension of time will be given and the allotment made in his favour shall be treated as Cancelled and he / she has no claim further on such allotment and they will not be considered for allotment of seats in the subsequent round. Such seats shall revert back to the pool and fee paid by them will be forfeited.

**Implication:** **Not eligible to participate in the subsequent rounds.**

**Important:** Before opting this choice candidate is advised to be sure as he / she cannot come back to Option Entry Process in DCET-2026.

**Choice-2:** Satisfied with the allotted seat but wishes to participate in the next round. **I will pay the prescribed fees by downloading the Challan / allotted details from the KEA website for the seat confirmed or allotted in the first round**. If higher order options gets allotted in the second round, then first round allotted seat gets cancelled automatically OR if higher options seats are not allotted then earlier allotted seat shall remains in candidates favour.

**Implication:** **Eligible to participate in the subsequent round keeping the seat allotted on hold. However, if a seat in the higher options gets allotted the candidate loses his old seat. There is no choice between the seats.**

**Important:** Fresh options will be permitted only when the new college / courses which are included in the seat matrix after the allotment of first round.

**Choice-3:** Not satisfied with allotted seat but wishes to participate in the next round with already entered options except the allotted option by surrendering the allotted seat.

**Implication:** **Eligible to participate in the subsequent round and no hold on allotted seat.**

**Choice-4:** Not satisfied with KEA allotted seat and candidate has got seat elsewhere, so candidate is **quitting** and not to be considered for allotment of seats in any of the further rounds.

**Implication:** Not e**ligible to participate in the subsequent round no hold on the allotted seat and seat allotted earlier will get cancelled.**

## 5.4 ಎರಡನೇ ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆ

**ಗಮನಿಸಿ:** ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ ಅಥವಾ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು confirm ಆದಲ್ಲಿ ಯಾವುದೇ ಕಾರಣಕ್ಕೂ ಬದಲಾಯಿಸುವುದಕ್ಕೆ ಅಥವಾ ರದ್ದುಪಡಿಸಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಸೂಚಿಸಿದೆ. ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಗಳನ್ನು ಮತ್ತು ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯನ್ನು ಮಾಡುವುದರಿಂದ ಅಭ್ಯರ್ಥಿಯು ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯಲು ಸೂಚಿಸಿದೆ.

ಎರಡನೇ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ, ಅಭ್ಯರ್ಥಿಗಳಿಗೆ ಯಾವುದೇ **CHOICE** ಗಳು ಇರುವುದಿಲ್ಲ ಹಾಗೂ ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ, ನಿಗದಿತ ದಿನಾಂಕದೊಳಗೆ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಬೇಕು.

ಸೂಚನೆ: ಇಚ್ಛೆ / ಆಯ್ಕೆಗಳನ್ನು ಅಂತಿಮವಾಗಿ **SAVE** ಮಾಡುವ ಮೊದಲು ಅಭ್ಯಥಿಗಳು ದಾಖಲಿಸಿರುವ ಇಚ್ಛೆ / ಆಯ್ಕೆಗಳ ಪಟ್ಟಿಯ ಪ್ರಿಂಟ್ ತೆಗೆದುಕೊಂಡು ಪರಿಶೀಲಿಸಿ, ನಂತರ **SAVE** ಮಾಡಿ.

ಏಕೆಂದರೆ ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸುವ options ಗಳನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡುವುದರಿಂದ ಯಾವುದೇ ಕಾರಣಗಳನ್ನು ನೀಡದೇ ಹಂಚಿಕೆಯಾದ ಕಾಲೇಜಿನಲ್ಲಿ ಪ್ರವೇಶವನ್ನು ಕಡ್ಡಾಯವಾಗಿ ಪಡೆಯಬೇಕು. ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರದಿಂದ options ಗಳನ್ನು ಆದ್ಯತೆಯ ಕ್ರಮಾಂಕದಲ್ಲಿ ಸಲ್ಲಿಸಬೇಕು.

## 5.5 ಮೊದಲನೇ ಸುತ್ತಿನಲ್ಲಿ CHOICE-2 ಅನ್ನು ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡಿರುವ ಅಭ್ಯರ್ಥಿಗಳ ಗಮನಕ್ಕೆ:

ಮೊದಲನೇ ಸುತ್ತಿನಲ್ಲಿ **CHOICE-2** ಅನ್ನು ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸಿರುತ್ತಾರೆ ಎಂದರೆ ಈ ಮೊದಲು ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ.

1. ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು (Higher order Options above the allotted option) ದೊರಕದಿದ್ದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿದ್ದ ಸೀಟು ಉಳಿಯುತ್ತದೆ.
2. ಅಭ್ಯರ್ಥಿಗಳು ದಾಖಲಿಸಿರುವ ಆದ್ಯತೆಗಳು ಈ ಸುತ್ತಿಗೂ ಸಹ ಅನ್ವಯಿಸುತ್ತದೆ.
3. ಮೇಲ್ಪಟ್ಟ ಆದ್ಯತೆಗಳು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು.

   ಉದಾ: ಒಬ್ಬ ಅಭ್ಯರ್ಥಿಗೆ ಮೊದಲನೇ ಸುತ್ತಿನಲ್ಲಿ 78ನೇ ಕ್ರಮಾಂಕದ ಆದ್ಯತೆಗೆ ಸೀಟು ಲಭ್ಯವಾಗಿದೆ ಎಂದು ಭಾವಿಸಿದಲ್ಲಿ, ಒಂದರಿಂದ 77ನೆಯ ವರೆಗಿನ ಆದ್ಯತೆಗಳನ್ನು ಪರಿಗಣಿಸಲಾಗುತ್ತದೆ.
4. ಕೆಳಗಿನ ಎಲ್ಲಾ ಆದ್ಯತೆಗಳನ್ನು ಅಂದರೆ 79 ರಿಂದ ಕೊನೆಯವರೆಗಿನ ಆದ್ಯತೆಗಳನ್ನು ಪರಿಗಣಿಸಲಾಗುವುದಿಲ್ಲ.
5. ಅಭ್ಯರ್ಥಿಗಳು ಒಂದರಿಂದ 77ರ ವರೆಗಿನ ಆದ್ಯತೆಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ತೆಗೆದುಹಾಕಬಹುದು.

6. ಮೆರಿಟ್ ಆಧಾರದ ಮೇಲೆ ಒಂದರಿಂದ 77 ರ ವರೆಗಿನ ಯಾವುದಾದರೂ ಆದ್ಯತೆಗೆ ಸೀಟು ಹಂಚಿಕೆಯಾದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ತಾನಾಗಿಯೇ ರದ್ದುಗೊಳ್ಳುತ್ತದೆ ಮತ್ತು ರದ್ದುಗೊಂಡ ಸೀಟುಗಳನ್ನು ನಂತರದ ಮೆರಿಟ್‌ನ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು.
7. ಮೆರಿಟ್ ಆಧಾರದ ಮೇಲೆ ಒಂದರಿಂದ 77 ರ ವರೆಗಿನ ಯಾವುದಾದರೂ ಆದ್ಯತೆಗೆ ಸೀಟು ಸಿಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಖಾತರಿಯಾಗುತ್ತದೆ / ಉಳಿಯುತ್ತದೆ.
8. ಪ್ರತಿ ಬಾರಿಯೂ ಗಣಕಯಂತ್ರವು ಮೇಲಿನ ಆದ್ಯತೆಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸುವುದರಿಂದ ಅಭ್ಯರ್ಥಿಗೆ ಉತ್ತಮವಾದ ಸೀಟು ದೊರೆಯುವ ಸಾಧ್ಯತೆಗಳಿರುತ್ತದೆ. ಅಂದರೆ ಗಣಕ ಯಂತ್ರವು ಆದ್ಯತೆಗಳ ಹುಡುಕುವಿಕೆಯನ್ನು ಒಂದರಿಂದ ಶುರುಮಾಡುತ್ತದೆ.
9. ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸಿದ ಆದ್ಯತೆಗಳ ಮೇರೆಗೆ ಸೀಟನ್ನು ಹಂಚಿಕೆ ಮಾಡಿರುವುದರಿಂದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಮೇಲೆ ತಿರಸ್ಕರಿಸುವಂತಿಲ್ಲ ಮತ್ತು ನಿರ್ಲಕ್ಷ್ಯತೆಯನ್ನು ತೋರುವಂತಿಲ್ಲ.
10. ಈ ಮೊದಲೇ ಹೇಳಿದಂತೆ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ನಂತರದ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಕಾಲೇಜಿನಲ್ಲಿ **ಮುಂದುವರಿಯಲು ಸಾಧ್ಯವಾಗುವುದಿಲ್ಲ** ಅಂತಹ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ಪ್ರವೇಶವನ್ನು ಪಡೆಯಬೇಕು.
11. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಬದಲಾಯಿಸಬಹುದು ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

## 5.6 ಮೊದಲನೇ ಸುತ್ತಿನಲ್ಲಿ CHOICE-3 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳ ಗಮನಕ್ಕೆ:

ಅಭ್ಯರ್ಥಿಗಳು ಗಮನಿಸಬೇಕಾದ ಮಹತ್ವದ ಸೂಚನೆ ಎಂದರೆ, ಈ ಮೊದಲು ದಾಖಲಿಸಿದ್ದ ಇಚ್ಛೆ / ಆಯ್ಕೆಗಳನ್ನು ತೋರಿಸಲಾಗುವುದು, ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ಇಚ್ಛೆ / ಆಯ್ಕೆಗಳನ್ನು ಸರಿಪಡಿಸಬಹುದು. ನಂತರ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಿ, ರ್‍ಯಾಂಕ್ ಆಧಾರದ ಮೇಲೆ ಸೀಟು ಹಂಚಿಕೆಯನ್ನು ಮಾಡಲಾಗುವುದು ಹಾಗು ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯುವುದು ಕಡ್ಡಾಯವಾಗಿರುವುದರಿಂದ, ತಮಗೆ ಇಷ್ಟವಿರುವ ಇಚ್ಛೆ / ಆಯ್ಕೆಗಳನ್ನು ಮಾತ್ರ ದಾಖಲಿಸಬೇಕು. ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ, ಅಭ್ಯರ್ಥಿಗಳಿಗೆ ಯಾವುದೇ **CHOICE** ಗಳು ಇರುವುದಿಲ್ಲ ಹಾಗೂ ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ, ನಿಗದಿತ ದಿನಾಂಕದೊಳಗೆ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಬೇಕು.

ಸೂಚನೆ: ಇಚ್ಛೆ / ಆಯ್ಕೆಗಳನ್ನು ಅಂತಿಮವಾಗಿ **SAVE** ಮಾಡುವ ಮೊದಲು ಅಭ್ಯಥಿಗಳು ದಾಖಲಿಸಿರುವ ಇಚ್ಛೆ / ಆಯ್ಕೆಗಳ ಪಟ್ಟಿಯ ಪ್ರಿಂಟ್ ತೆಗೆದುಕೊಂಡು ಪರಿಶೀಲಿಸಿ, ನಂತರ **SAVE** ಮಾಡಿ.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

## 5.7 SECOND and FINAL ROUND OF SEAT ALOTMENT:

After the completion of 1st Round seat allotment, all the unfilled / surrendered / forfeited / cancelled / newly added seats, if any, will be offered as CASUAL VACANCIES.

All candidates who have entered Choice 2, Choice-3 and those candidates who have not been allotted any seat in First Round will be eligible to participate in this round.

Allotment of seats in the Second Round will be that of the same with regard to order of allotment followed in the First Round.

IMPORTANT: The options entered by the candidate for the first round will remain same even for this second round of seat allotment. The candidates will not be allowed to enter options again. Option Entry done before the first round will be the final list of options. The priority of options entered by the candidate will be shown on the option entry module by obtaining the candidate credentials. Candidate may delete or alter order of higher options. The candidate will be allowed to add new options for any colleges and course that came into the seat matrix after the first round. Candidates who are participating in this round mean they are looking for better seat than the allotted seat in the earlier round. If the candidate does not get any seat in this round then the seat allotted to him / her in the earlier round if any stands confirmed.

i. The priority of options entered by the candidates will remains same even for this round also.

ii. All the above higher order options will be considered for allotment of seats. Think that, if a candidate has been allotted a seat in the First round for his / her 115th option, all the above higher order options means, option number 1 to 114 will only be considered for allotment.

iii. All the lower order option from 116 to the last entered options will not be considered for allotment. Candidate can modify / alter / delete the priority of options from 1 to 114.

iv. If any of the options from 1 to 114 is available in the order of merit then computer will allot the seats to that candidate and automatically the earlier allotted seat will get cancelled and added to the seat matrix and it will be offered to the next candidate below and to subsequent candidates.

v. If a candidate fails to get any of the options from 1 to 114 then the seat allotted to him / her in earlier round for 115th option will remain with him / her.

vi. Always, the computer starts from option 1, so that the candidate will get the best of the best options entered by him / her. (Options 1 to Option 114)

vii. Candidates should not claim any ignorance on allotment of seats and they should not reject the allotted seats since the seat is allotted to candidates based on the options entered by them and order of merit.

viii. For any reason candidates will not be allowed to continue in their earlier allotted colleges. As already informed the earlier allotted seat will not be in their favour and therefore such candidates should invariably report to the allotted colleges.

ix. If the candidate gets a seat in the colleges entered by him / her in this round, the seat opted by him / her in this round will be confirmed and the seat held by him / her in the earlier round will gets cancelled automatically.

x. Please note that if any seat gets allotted in this round as per merit and options entered by the candidate, **there is no chance of getting back the earlier allotted seat.**

xi. Candidates are advised to modify / delete / re-order the options they want to select whether the seats shown in the seat matrix or not, only for the reason that consequential vacancies may arise during allotment process and the candidates will have a chance of getting a better seat if they have entered the options.

**NOTE:** Consequential vacancies that arise after their turn cannot be claimed.

## 5.8 Additional instructions to first round Choice-2 candidates.

- Candidates who exercise Choice-2 are participating in the second round by holding the seat allotted to them in the first round. If higher order options are allotted to them, the earlier seat will automatically stand cancelled. OR if any of the Higher Order Options are not allotted, then the seat allotted to them in the first round will remain with the candidate.
- Higher order options means, presume that the candidate has entered 180 options, and the seat is allotted for his / her priority number 123 in the first round, then the priority number 1 to 122 are the higher order options.
- If any of the Higher Order Options are not allotted, then the seat allotted to them in the first round will remain with the candidate.
- The Choice 2 candidates are participating by holding a seat allotted in the First Round, if any seat is allotted to them in this round, then their First Round seat gets added to the seat matrix immediately and is offered to the next eligible candidates in the order of options and priority of options.

- While modifying the order of options or deleting the options candidates are advised to give only such options that are better than his / her allotted seat. If the modified option gets allotted, they lose their old seat. If none of the seats are available, then the candidate's earlier seat is retained.
- For Choice 2 candidates, the seat allotted in the First Round will be considered as last option. The Choice 2 candidates should be very careful while submitting the options. One should understand that, the seat allotted in the First Round will become the last option, it means all the higher options saved by the candidates will be treated as options for seat allotment.
- All the higher order options will be displayed for entry of options, if any candidate is intending to retain the same seat which is allotted in the First Round, then he / she has to delete all such options which is displayed on the option entry portal, then the seat allotted in the First Round will be retained in this round also.

**NOTE:** Consequential vacancies that arise after their turn cannot be claimed.

## 5.9 Additional instructions to first round Choice-3 candidates.

(a) The Choice 3 candidates are participating without holding a seat allotted in the First Round, if any seat is allotted to them in this round, then such will be confirmed in their favour or if no seat is allotted to them, then they will not be having any seat in their favour.

(b) All the options except the allotted option will be displayed for modifying or deleting the options.

(c) While modifying the order of options or deleting the options, candidates are advised to give only such options that are better than his / her allotted seat and for those options candidates are willing to join the college / course in case the seat is allotted.

- Candidates are advised to retain / re-order only such options, if the seat is allotted, they have to compulsorily join the allotted college in the second and final Round seat allotment without giving any reasons /excuses.
- The Choice 3 candidates are participating without holding a seat allotted in the First Round, if any seat is allotted to them in this round, then such will be confirmed in their favour or if no seat is allotted to them, and then they will not be having any seat in their favour.

- Candidates are advised to give only such options that are better than his / her allotted seat and for those options candidates are willing to join the college / course in case the seat is allotted.

## 5.10 Important Instructions to Candidates – Regarding Second Round

**The following types of seats are made available for second extended round seat allotment.**

1. Unfilled seats of First Round.
2. Choice 3 seats of First Round.
3. Choice 4 seats of First Round.
4. Exercised Choice 1 in First Round but failed to make payment or not joined the college.
5. Exercised Choice 2 in First Round but failed to make payment.
6. Cancelled / Surrendered seats.
7. Candidates allotted seats in First Round but failed to exercise their Choice within the last date.
8. Newly added seats if any.
9. Consequential Vacancies.

**Types of candidates allowed for Second and Final Round.**

1. Choice 2 candidates of First Round who have made the payment.
2. Choice 3 candidates of First Round.
3. Not allotted any seat either in First Round.

**The following types of candidates are not eligible to participate in the Second and Final Round.**

a. Candidates who have failed to exercise any choice even after allotment of seats in the First Round.

b. Candidates who have exercised Choice 1 or 2 in the First Round but failed to make the payment for the seat confirmed by them.

c. Candidates who have exercised Choice 1 after seat allotment in First Round but failed to collect the Admission Order.

### *5.11 Seat Allotment:*

After the last date prescribed for entry of options for the Second Round, action will be taken to allot the seats based on Merit and Options entered by the candidates, by following the Roster System and Reservation Policy.

### 5.12 Post allotment procedure: Implication: - Choices before a candidate.

1. There will be no Choice to exercise to the candidates.
2. Candidates who have allotted seat in any discipline are required to pay the prescribed fees (if not paid) and should compulsorily report to the colleges on or before the last date mentioned in the admission order.
3. If any candidate fails to report to the college after allotment of seats in the Second Round, legal action will be initiated against such candidate in accordance with law.

## ಗಮನಿಸಿ:

ಸೀಟುಗಳ ಲಭ್ಯತೆ ಹಾಗೂ ಅನುಮೋದನೆ ಅನುಸಾರ ಅರ್ಹ ಡಿಪ್ಲೊಮ ಅಭ್ಯರ್ಥಿಗಳಿಗೆ 3ನೇ ಸುತ್ತಿನ ಸೀಟು ಹಂಚಿಕೆ ಸುತ್ತನ್ನು ನಡೆಸುವ ಸಾಧ್ಯತೆ ಇರುತ್ತದೆ. ಆದರೆ, ಮೊದಲನೇ ಹಾಗು ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಪಡೆದಿಲ್ಲದಿರುವ ಅಭ್ಯರ್ಥಿಗಳು ಮಾತ್ರ ಹೊಸದಾಗಿ Options ಗಳನ್ನು ದಾಖಲಿಸಿ ಭಾಗವಹಿಸಬಹುದು. ಸೀಟು ರದ್ದುಪಡಿಸಿಕೊಂಡಿರುವ ಅಭ್ಯರ್ಥಿಗಳು ಹೊಸದಾಗಿ ನೋಂದಣಿ ಮಾಡಿ ಹೊಸದಾಗಿ Options ಗಳನ್ನು ದಾಖಲಿಸಿ ಭಾಗವಹಿಸಬಹುದು.

ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಸಂದರ್ಭದಲ್ಲಿ ಕಾಲೇಜಿಗೆ ಪ್ರವೇಶ ಪಡೆಯಲು ಆಸಕ್ತಿ ಇರುವ ಕಾಲೇಜುಗಳನ್ನು ಮಾತ್ರ ದಾಖಲಿಸಲು ಸೂಚಿಸಿದೆ. ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡುವ ಹಿನ್ನಲೆಯಲ್ಲಿ ಸೀಟು ಹಂಚಿಕೆಯ ನಂತರ ಉಂಟಾಗುವ ಪರಿಣಾಮಗಳಿಗೆ ಸಂಪೂರ್ಣವಾಗಿ ಅಭ್ಯರ್ಥಿಗಳೆ ಜವಾಬ್ದಾರರಾಗಿರುತ್ತಾರೆ.

ಹಂಚಿಕೆಯಾದ ಸೀಟಿಗೆ ಅಭ್ಯರ್ಥಿಗಳು ಪ್ರವೇಶ ಪಡೆಯಲು ವಿಫಲರಾದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುತ್ತದೆ, ಆದ್ದರಿಂದ ಎಚ್ಚರಿಕೆಯಿಂದ Options ಗಳನ್ನು ದಾಖಲಿಸಲು ಸಲಹೆ ನೀಡಲಾಗಿದೆ.

## 6. A NOTE ON REFUND AND FORFEITURE OF FEE / CANCELLATION OF A SEAT

(1) If a candidate who has been allotted a seat in any discipline in the First Round and who has reported to the college, wishes to surrender / cancel the seat before the last date notified for entry of options for the Second and Final Round, the Executive Director, shall deduct **Rs.5,000**/- as processing fee and refund the remaining fee paid.

(2) If a candidate who

(3) has been allotted a seat in any discipline in the First Round and who has reported to the college or not, surrenders the seat after the completion of Second Round, the Executive Director, shall forfeit the entire fee paid.

(4) As per rule 12 (2) of CET-2006 rules, payment of penalty is mandatory and no exemption on penalty payment to any category candidate.

(5) The candidate who surrenders the seat allotted in the Second Round, the Executive Director, shall forfeit the entire fee paid.

(6) No surrender or cancellation of seat shall be accepted, unless the candidate surrenders the **original** admission order issued by the KEA, **original** Bank Challan, **original** Green Card and **original** Verification Slip.

(7) If a candidate does not surrender / cancel / fails to join the allotted college even after the completion of the Second Round the Executive Director, Karnataka Examinations Authority shall forfeit the entire fee amount paid by the candidates.

*(8) If a candidate reports to the college and later on leaves the college he / she has to necessarily surrender the seat back to KEA only. It is the endeavor of KEA to see that subsidized Government Quota seats are accessible and available to all meritorious students. Hence, failing to surrender the seat back to KEA will be viewed as a breach of contract and severe lack of social responsibility.*

## ಸೀಟನ್ನು ರದ್ದುಗೊಳಿಸುವುದು, ಶುಲ್ಕ ಮರುಸಂದಾಯ ಮತ್ತು ಶುಲ್ಕ ಮುಟ್ಟುಗೋಲು ಹಾಕಿಕೊಳ್ಳುವುದರ ಕುರಿತಾದ ಟಿಪ್ಪಣಿ

1. ಒಬ್ಬ ವಿದ್ಯಾರ್ಥಿ/ನಿಗೆ, ಮೊದಲ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನಿನಲ್ಲಿ ಸೀಟು ಹಂಚಿಕೆಯಾಗಿದ್ದು ಮತ್ತು ಆತ/ ಆಕೆ, ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿದ್ದು, ಆನಂತರ, ಎರಡನೇ / ಕ್ಯಾಶುಯಲ್ ತೆರವು ಹಂತದ ಸುತ್ತಿಗೆ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕಿಂತ ಮೊದಲು ತಮ್ಮ ಆ ಸೀಟನ್ನು ಬಿಟ್ಟುಕೊಡಲು/ ರದ್ದುಪಡಿಸಲು ಇಚ್ಛಿಸಿದ ಪಕ್ಷದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರು ಅಂತಹ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಶುಲ್ಕದಿಂದ ಪ್ರಕ್ರಿಯಾ ಶುಲ್ಕವಾಗಿ ರೂ. 5,000/– ಮೊತ್ತವನ್ನು ಕಡಿತಗೊಳಿಸಿಕೊಳ್ಳುತ್ತಾರೆ ಮತ್ತು ಉಳಿದ ಮೊತ್ತವನ್ನು ವಿದ್ಯಾರ್ಥಿ/ನಿಗೆ ಮರುಸಂದಾಯ ಮಾಡುತ್ತಾರೆ.
2. ಮೊದಲನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನಿನಲ್ಲಿ ಒಬ್ಬ ವಿದ್ಯಾರ್ಥಿ/ನಿಗೆ ಸೀಟು ಹಂಚಿಕೆಯಾಗಿದ್ದು ಮತ್ತು ಆತ/ ಆಕೆ ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿರಲೀ ಅಥವಾ ಇಲ್ಲದಿರಲೀ ತನಗೆ ಹಾಗೆ ಹಂಚಿಕೆಯಾಗಿರುವ ಸೀಟನ್ನು **ಎರಡನೇ ಸುತ್ತು** / ಕ್ಯಾಶುಯಲ್ ತೆರವು ಹಂತದ ಸುತ್ತು **ಮುಗಿದ ನಂತರ ಬಿಟ್ಟುಕೊಡಲು ಇಚ್ಛಿಸಿದ ಪಕ್ಷದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಅಂಥ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.**
3. ಎರಡನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನಿನಲ್ಲಿ ಒಬ್ಬ ವಿದ್ಯಾರ್ಥಿ/ನಿಗೆ ಸೀಟು ಹಂಚಿಕೆಯಾಗಿದ್ದು ಮತ್ತು ಆತ/ ಆಕೆ ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿರಲೀ ಅಥವಾ ಇಲ್ಲದಿರಲೀ ತನಗೆ ಹಾಗೆ ಹಂಚಿಕೆಯಾಗಿರುವ ಸೀಟನ್ನು **ಬಿಟ್ಟುಕೊಡಲು ಇಚ್ಛಿಸಿದ ಪಕ್ಷದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಅಂಥ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.**
4. ಸಿಇಟಿ–2006 ರ 12 (2) ರಲ್ಲಿನ ದಂಡ ಪಾವತಿಸುವ ನಿಯಮವು ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ. ದಂಡ ಪಾವತಿಯಿಂದ ವಿನಾಯಿತಿಯು ಯಾವುದೇ ವರ್ಗದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.
5. **ವಿದ್ಯಾರ್ಥಿ /ನಿಯು, ಕ.ಪ.ಪ್ರಾ. ಪಡೆದಿರುವ ಮೂಲ ಪ್ರವೇಶಾತಿ ಆದೇಶ ಪತ್ರ, ಮೂಲ ಬ್ಯಾಂಕ್ ಚಲನ್, ಮತ್ತು ಮೂಲ ಪರಿಶೀಲನಾ ಚೀಟಿಯನ್ನು ಒಪ್ಪಿಸದಿದ್ದರೆ, ಆತ/ ಆಕೆ ಸೀಟನ್ನು ಬಿಟ್ಟುಕೊಡುವುದನ್ನು ಅಥವಾ ರದ್ದುಪಡಿಸಿಕೊಳ್ಳುವುದನ್ನು ಒಪ್ಪಿಕೊಳ್ಳುವುದಿಲ್ಲ.**
6. **ಇಂಜಿನಿಯರಿಂಗ್ ಕಾಲೇಜು ಅಥವಾ ಸಂಸ್ಥೆಯ ಯಾವುದೇ ಕೋರ್ಸಿಗೆ ಸೀಟು ಹಂಚಿಕೆಯಾದ ಅಭ್ಯರ್ಥಿಯು ಎರಡನೇ ಸುತ್ತು / ಕ್ಯಾಶುಯಲ್ ತೆರವು ಹಂತದ ಸುತ್ತು ಮುಗಿದ ನಂತರವೂ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯದಿದ್ದಲ್ಲಿ** ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು.
7. ವಿದ್ಯಾರ್ಥಿ / ನಿಯು, ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿದ್ದು, ಆನಂತರ ಆ ಕಾಲೇಜನ್ನು ಬಿಟ್ಟುಬಿಟ್ಟರೆ, ಆತ/ಆಕೆ ಅಂಥ ಸೀಟನ್ನು ತಪ್ಪದೆ ಕ.ಪ.ಪ್ರಾ.ಕ್ಕೆ ಮಾತ್ರ ಬಿಟ್ಟುಕೊಡಬೇಕು. ಸಹಾಯಧನ ಒದಗಿಸಿರುವ ಸರ್ಕಾರಿ ಕೋಟಾದ ಸೀಟುಗಳು, ಎಲ್ಲಾ ಮೆರಿಟ್ ವಿದ್ಯಾರ್ಥಿಗಳಿಗೆ ಸಿಗುವಂತೆ ಮತ್ತು ದೊರೆಯುವಂತೆ ನೋಡಿಕೊಳ್ಳುವುದು ಕ.ಪ.ಪ್ರಾ.ದ ಪ್ರಯತ್ನವಾಗಿವೆ. ಆದ್ದರಿಂದ, ಕ.ಪ.ಪ್ರಾ.ಕ್ಕೆ ಸೀಟನ್ನು ಬಿಟ್ಟುಕೊಡುವುದರಲ್ಲಿ ವಿಫಲವಾಗುವುದನ್ನು, ಕರಾರಿನ ಉಲ್ಲಂಘನೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಎಸಗಿದ ಗುರುತರವಾದ ಲೋಪ ಎಂದು ಪರಿಗಣಿಸಲಾಗುವುದು.